ಸ್ಟೇಟ್‌ಮೆಂಟ್—೨

ಒಣಗಿ ಹೋಗಿರುವ ಕೊಳವೆ ಬಾವಿಗಳ ವಿವರ

ಕ್ರಮಸಂಖ್ಯೆ	ತಾಲ್ಲೂಕು	ಒಣಗಿ ಹೋಗಿರುವ ಕೊಳವೆ ಬಾವಿಗಳ ಸಂಖ್ಯೆ
೧	ಬಂಗಾರಪೇಟೆ	೩೫
೨	ಕೋಲಾರ	೨೧
೩	ಮಾಲೂರು	೧೮
೪	ಮುಳಬಾಗಿಲು	೨೫
೫	ಶ್ರೀನಿವಾಸಪುರ	೨೦
೬	ಚಿಕ್ಕಬಳ್ಳಾಪುರ	೪೪
೭	ಬಾಗೇಪಲ್ಲಿ	೨೫
೮	ಚಿಂತಾಮಣಿ	೩೨
೯	ಗೌರಿಬಿದನೂರು	೧೮
೧೦	ಶಿಡ್ಲಘಟ್ಟ	೩೦
೧೧	ಗುಡಿಬಂಡೆ	೨೧
	ಒಟ್ಟು	೨೮೮

ಉಪಾಧ್ಯಕ್ಷಣಿಯವರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ವರದಿಗಳನ್ನು ಒಪ್ಪಿಸುವುದು

ಶ್ರೀ ಹೆಚ್. ಏಕಾಂತಯ್ಯ (ಅಧ್ಯಕ್ಷರು, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ).—ಸನ್ಮಾನ್ಯ ಅಧ್ಯಕ್ಷಣಿಯವರೆ, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯು ೪೭, ೪೮, ೪೯ ಮತ್ತು ೫೦ನೇ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ಸರ್ಕಾರಿ ನೌಕರರ ಸಾಮೂಹಿಕ ರಾಜೀನಾಮೆ ಕುರಿತು

ಶ್ರೀ ಪಿ. ಜಿ. ಆರ್. ಸಿಂಧ್ಯ.—ಸನ್ಮಾನ್ಯ ಅಧ್ಯಕ್ಷಣಿಯವರೆ, ಒಂದು ಮಹತ್ವದ ವಿಚಾರವನ್ನು ನಾನು ಈ ಸಭೆಯಲ್ಲಿ ಮತ್ತು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ, ನಾನು, ನಮ್ಮನಾಯಕರಾದ ಚಂದ್ರೇಗೌಡರು, ಏಕಾಂತಯ್ಯನವರು, ದೇಶಪಾಂಡೆಯವರು ಎಲ್ಲರೂ ಸೇರಿ ಒಂದು ನಿಲುವಳಿ ಸೂಚನೆಯನ್ನು ಈ ಸದನದಲ್ಲಿ ತೆಗೆದುಕೊಳ್ಳಬೇಕೆಂದು ಪ್ರಸ್ತಾಪ ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್.—ನಾನೂ ಸಹ ಒಂದು ಪತ್ರ ಬರೆದಿದ್ದೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ವಾಟಾಳ್ ನಾಗರಾಜ್‌ರವರು ಅದಕ್ಕೆ ಸಹಿ ಹಾಕಿದ್ದಾರೆ. ಈಗ ಏನಾಗಿದೆ ಅಂದರೆ, ಕಳೆದ ೮-೧೦ ದಿವಸಗಳಿಂದ ಸರ್ಕಾರದ ಎಲ್ಲಾ ಕಛೇರಿಗಳ ಕೆಲಸಗಳು ಸಹಿತ ಇಡೀ ರಾಜ್ಯದಲ್ಲಿ ಸ್ಥಗಿತವಾಗಿವೆ. ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದ ಪರವಾಗಿ ಒಂದು ಹೇಳಿಕೆಯನ್ನು ನೀಡಿದರು ಈ ಬಗ್ಗೆ ವಾರ್ತಾ ಸಚಿವರು ಸಹಿತ ಪತ್ರಿಕೆಗಳಿಗೆ ಹೇಳಿಕೆ ನೀಡಿದರು. ನಾವು ಜೂನ್ ೧ನೇ ತಾರೀಖಿನಿಂದ ಯಾವುದೇ ಒಂದು ಪರ್ಯಾವಣೆಯನ್ನು ಯಾವುದೇ ಇಲಾಖೆಯಲ್ಲೂ ಮಾಡುವುದಿಲ್ಲ, ಅದರಿಂದಾಚೆಗೆ ನಾವು ನಿಲ್ಲಿಸುತ್ತೇವೆ ಎನ್ನುವ ಮಾತನ್ನು ಹೇಳಿದರು. ಯಾವ ಯಾವ ಜಾಗಕ್ಕೆ ಯಾರು ಯಾರು ಹಾಕಿಸಿಕೊಳ್ಳಬೇಕು, ಎಲ್ಲೆಲ್ಲಿಗೆ ಹಾಕಿಸಿಕೊಳ್ಳಬೇಕು, ಏನೇನು ಮಾಡಬೇಕು ಎಂಬ ಬಗ್ಗೆ ೧೫ನೇ ತಾರೀಖಿನಿಂದ ಪ್ರಾರಂಭವಾಗಿ ೧ನೇ ತಾರೀಖಿನವರೆಗೆ

ನಡೆಯಿತ್ತು, ಸರ್ಕಾರಿ ಅಧಿಕಾರಿಗಳು ಬೀದರ್‌ನಿಂದ ಹಿಡಿದು ಕೊಡಗು ಜಿಲ್ಲೆಯವರೆಗೂ ಸಹಿತ ಬೆಂಗಳೂರಿನಲ್ಲಿ ವಾಸ ಮಾಡಿದರು. ಲೆಜಿಸ್ಲೇಟರ್ಸ್ ಹೋಮ್‌ನಲ್ಲಿ ಲೆಜಿಸ್ಲೇಟರ್ಸ್ ವಾಸ ಮಾಡಲಿಕ್ಕೆ ಕಷ್ಟ ಇತ್ತು. ನೀರಿನ ಸೌಕರ್ಯ ಸಹಿತ ನಮಗೆ ಸಿಕ್ಕುತ್ತಾ ಇರಲಿಲ್ಲ. ಈ ವಿಚಾರದ ಬಗ್ಗೆ ಏನಾಗಿದೆ ಎಂದು ಪತ್ರಿಕೆಗಳಲ್ಲಿ ಇವೊತ್ತು ಬಂದಿದೆ...

(ಗೊಂದಲ)

ಉಪಾಧ್ಯಕ್ಷರು.—ನಾನು ಈಗ [illegible], ದಯವಾಡಿ ಎಲ್ಲ ಸದಸ್ಯರು ಕುಳಿತುಕೊಳ್ಳಬೇಕು

(ಗೊಂದಲ)

ಉಪಾಧ್ಯಕ್ಷಣಿಯವರು,—ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ ಏನು ಎಂದು ಕೇಳೋಣ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಎಲ್ಲೆಲ್ಲಿ ಎಷ್ಟು ಹೋಗಿದೆ ಯಾರು ಯಾರು ಲಂಚವನ್ನು ತೆಗೆದುಕೊಂಡಿದ್ದಾರೆ ಎಂಬುದರ ಬಗ್ಗೆ ಕೂಡ ತನಿಖೆ ನಡೆಯಬೇಕು.

(ಗೊಂದಲ)

ಶ್ರೀ ಪಿ. ಜಿ. ಆರ್. ಸಿಂಧ್ಯ.—೫೦ ಸಾವಿರ ಜನ ನೌಕರರ ಸಾಮೂಹಿಕ ವರ್ಗಾವಣೆ ಆಗಿದೆ. ಕಳೆದ ೪೦ ವರ್ಷಗಳ ಇತಿಹಾಸದಲ್ಲಿ ಈ ರೀತಿ ಆಗಿರಲಿಲ್ಲ. ಹಣದ ದುರುಪಯೋಗವಾಗಿರುವುದು ಇಲ್ಲಿ ಪತ್ರಿಕೆಯಲ್ಲಿ ಬಂದಿದೆ. ಇದರ ಬಗ್ಗೆ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕು. ಇದರಲ್ಲಿ ಪಾಯಿಂಟ್ ಆಫ್ ಆರ್ಡರ್ ಏನು ಇದೆ ?

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ರೈತರ ಸಾಲ ಮನ್ನಾ ಆಗಬೇಕು. ಸಾರಿಗೆ ದರ ಜಾಸಿಯಾಗಿರುವ ಬಗ್ಗೆ ಚರ್ಚೆ ಮಾಡದೆ ವರ್ಗಾವಣೆ ಬಗ್ಗೆ ಇವರು ಚರ್ಚೆ ಮಾಡುತ್ತಿದ್ದಾರೆ. ಯಾರ್ಯಾರು ದುಡ್ಡು ಹೊಡೆದಿದ್ದಾರೆ ಎಂಬುದರ ಬಗ್ಗೆ ತನಿಖೆಯನ್ನು ನಡೆಸಲಿ. ಪ್ರತಿಯೊಬ್ಬ ಮಂತ್ರಿಗಳೂ ಕೂಡ ವರ್ಗಾವಣೆ ಪಟ್ಟಿಯನ್ನು ತಯಾರು ಮಾಡಲಿ.. ಇದು ನಮಗೆಲ್ಲರಿಗೂ ತಲೆತಗ್ಗಿಸುವಂತಹ ವಿಚಾರವಾಗಿದೆ.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ.—ಇದು ಯಾರ ಪ್ರಭಾವದಿಂದ ಬೆಳೆದಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇವೆ.

(ಗೊಂದಲ)

ಶ್ರೀ ಎಂ, ವೀರಪ್ಪ ಮೊಯಿಲಿ.—ನಿಯಮ ೬೧ರ ಕೆಳಗೆ ಯಾವುದಾದರೂ ಒಂದು ವಿಚಾರದ ಬಗ್ಗೆ ನಿಲುವಳಿ ಸೂಚನೆಯನ್ನು ಮಂಡನೆ ಮಾಡಲಿಕ್ಕೆ ಅನುಮತಿ ಕೇಳತಕ್ಕಂತಹ ಸಂದರ್ಭದಲ್ಲಿ ಈಗ ಮಾನ್ಯ ಉಪ ನಾಯಕರು ಎದ್ದಿದ್ದಾರೆ. ಇದರ ಜೊತೆಯಲ್ಲಿ ಇಲ್ಲಿರುವ ವಿಧಿಬಿಂದುವನ್ನು ಮಂಡಿಸಲು ತಾವು ಅನುಮತಿಯನ್ನು ನನಗೆ ಕೊಟ್ಟಿದ್ದೀರಿ.

(ಗೊಂದಲ)

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅನುಮತಿ ಕೊಡಬೇಕೆಂದು ನಾನು ಕೇಳುತ್ತಿದ್ದೇನೆ. ಇದರ ಮೇಲೆ ಪಾಯಿಂಟ್ ಆಫ್ ಆರ್ಡರ್ ಅನ್ನು ರೈಸ್ ಮಾಡಿದರೆ ಹೇಗೆ ?

ಶ್ರೀ ವಾಟಾಳ್ ನಾಗರಾಜ್.— ಇದರ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕಂ.

(ಗೊಂದಲ)

ಶ್ರೀ ಎಂ ವೀರಪ್ಪ ಮೊಯಿಲಿ.— ಚರ್ಚೆಗೆ ಅನುಮತಿ ಕೊಡಬೇಕಾದರೆ ಮಾನ್ಯ ವಿರೋಧ ಪಕ್ಷದ ನಾಯಕರಂ, ಉಪ ನಾಯಕರು ಕೊಟ್ಟಂತಹ ನಿಲುವಳಿ ಸೂಚನೆ ಏನು ಇದೆ ಅದು ನಿಯಮದ ಚೌಕಟ್ಟಿನಲ್ಲಿ ಬರುತ್ತದೆಯೆ ಇಲ್ಲವೇ ಎಂಬುದನ್ನು ತಾವು ಮೊದಲು ನೋಡಬೇಕು.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ.— ತಾವು ಹೇಳಿದ ಮೇಲೆ ನಾವು ಅನುಮತಿಯನ್ನು ಕೇಳುತ್ತಿದ್ದೇವೆ. ನಾವು ಇನ್ನೂ ವಿಚಾರವನ್ನು ಪ್ರಸ್ತಾಪ ಮಾಡಿಲ್ಲ.

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ.— ವರ್ಗಾವಣೆ ವಿಚಾರದಲ್ಲಿ ಆಡಳಿತ ಪಕ್ಷದ ಸದಸ್ಯರೂ ಕೂಡ ಚರ್ಚೆಯನ್ನು ಬಯಸಿದ್ದಾರೆ. ಆದ್ದರಿಂದ ಇವರ ಬಗ್ಗೆ ಚರ್ಚೆ ಮಾಡಬೇಕು.

(ಗೊಂದಲ)

ಉಪಾಧ್ಯಕ್ಷಣಿಯವರು.— ಅವರು ಹೇಳುವುದನ್ನು ಹೇಳಿ ಮುಗಿಸಲಿ. ಆಮೇಲೆ ತಾವು ಮಾತನಾಡಿ.

(ವಿರೋಧ ಪಕ್ಷದ ೪-೫ ಜನ ಸದಸ್ಯರು ಒಟ್ಟಿಗೆ ಎದ್ದು ನಿಂತು ಮಾತನಾಡತೊಡಗಿದರು.)

ಉಪಾಧ್ಯಕ್ಷಣಿಯವರು. — ನೀವು ೩-೪ ಜನ ಮಾತನಾಡಿದರೆ ಹೇಗೆ ರೆಕಾರ್ಡ್ ಆಗಬೇಕು? ಅದು ರೆಕಾರ್ಡ್ ಆಗುವುದಿಲ್ಲ.

(ಗೊಂದಲ)

ಶ್ರೀ ಬಿ.ಎಸ್ ಯಡಿಯೂರಪ್ಪ.— ನಾನು ಆಡಳಿತ ಪಕ್ಷದ ಸದಸ್ಯರ ಪರವಾಗಿ ಮಾತನಾಡಲಿ ಎದ್ದು ನಿಂತಿದ್ದೇನೆ. ಇಲ್ಲಿ ಇರುವಂತಹ ಎಲ್ಲಾ ಶಾಸಕರೂ ಸಹ ಒಂದಲ್ಲಾ ಒಂದು ರೀತಿಯಲ್ಲಿ ನಮ್ಮ ಕ್ಷೇತ್ರಕ್ಕೆ ಬೇಕಾದಂತಹ ಎಲ್ಲಿಗೆ ಸರಿ ಹೊಂದುವಂತಹ ಅಧಿಕಾರಿಗಳು ಬೇಕು ಎಂದು ವಿನಂತಿಯನ್ನು ಮಾಡಿಕೊಂಡಿದ್ದೇವೆ. ಆದರಲ್ಲಿ ಏನಾದರೂ ವ್ಯತ್ಯಾಸಗಳು ಆಗಿದ್ದರೆ ಸಂಬಂಧಪಟ್ಟ ಮಂತ್ರಿಗಳನ್ನು ಕೇಳಿ ಅದನ್ನು ಸರಿಪಡಿಸುವ ಪ್ರಯತ್ನ ನಡೆಯುತ್ತಿದೆ. ನೂರಕ್ಕೆ ೯೦ ಭಾಗ ಆಡಳಿತ ಪಕ್ಷದ ಸದಸ್ಯರು ಕೊಟ್ಟಂತಹ ವರ್ಗಾವಣೆಗಳು ಆಗುತ್ತಿದೆ. ಆದರೆ ನಾವು ಅಂದರೆ ವಿರೋಧ ಪಕ್ಷದವರು ನೂರು ಹೆಸರು ಕೊಟ್ಟಿದ್ದರೆ ಅದರಲ್ಲಿ ಒಂದೂ ಆಗಿಲ್ಲ. ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ತಲೆ ತಗ್ಗಿಸುವಂತಹ ರೀತಿಯಲ್ಲಿ ನಡೆದುಕೊಳ್ಳುವುದು ಸರಿಯಲ್ಲ. ಇದು ಪತ್ರಿಕೆಯಲ್ಲಿ ಕೂಡ ಬಂದಿದೆ, ಯಾರು ಈ ಅವ್ಯವಹಾರದಲ್ಲಿ ತೊಡಗಿದ್ದಾರೆಂಬುದನ್ನು ವಿಚಾರ ಮಾಡಲು ಸದನ ಸಮಿತಿಯನ್ನು ಮಾಡಿ. ಆಗ ತಪ್ಪಿತಸ್ಥರು ಯಾರು ಎಂಬುದು ಗೊತ್ತಾಗುತ್ತದೆ. ರೈತರ ಸಾಲ ಮನ್ನಾ ಬಗ್ಗೆ ಸಾರಿಗೆ ದರ ಏರಿರುವ ಬಗ್ಗೆ ಚರ್ಚೆ ಮಾಡಲಿಲ್ಲ. ಜನರ ಹಿತ ಇವರಿಗೆ ಬೇಕಾಗಿಲ್ಲ. ವರ್ಗಾವಣೆ ಮತ್ತೊಂದರ ಬಗ್ಗೆ ಚರ್ಚೆ ಮಾಡುವಂಥಾದ್ದು ತಲೆ ತಗ್ಗಿಸುವಂತಹ ವಿಚಾರವಾಗಿದೆ.

ಶ್ರೀ ಎಂ. ಮಹಾದೇವ್.— ನಾವು ಆಡಳಿತದಲ್ಲಿ ವರ್ಗಾವಣೆಯಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ ಎಂದು ನಿಮ್ಮ ಪಕ್ಷದವರೇ ಹೇಳುತ್ತಿದ್ದಾರೆ, ಈಗ ನೀವೇ ಸದನದ ಸಮಿತಿಯನ್ನು ಮಾಡಿ ಎಂದು ಹೇಳುತ್ತಿದ್ದೀರಿ. ಇದರ ಅರ್ಥವಾದರೂ ಏನು?

ಶ್ರೀ ಕೆ. ಎಸ್. ಈಶ್ವರಪ್ಪ.— ನಿಮ್ಮ ಸದಸ್ಯರೇ ಹೇಳಿದ್ದಾರೆ, ಅದರ ಪೇಪರ್ ತಂಬಾ ಬಂದಿದೆ, ನಿಮ್ಮ ಸದಸ್ಯರೇ ಕೂಗಾಡಿದ್ದಾರೆ. ಶಾಸಕರು ದುಡ್ಡು ತೆಗೆದುಕೊಂಡಿದ್ದಾರೆಂದು...

(ಗೊಂದಲ)

ಉಪಾಧ್ಯಕ್ಷಣಿಯವರು.— ನಥಿಂಗ್ ವಿಲ್ ಬಿ ರೆಕಾರ್ಡೆಡ್...

(ಗೊಂದಲ)

ಉಪಾಧ್ಯಕ್ಷಣಿಯವರು.— ಈಗ ಮಾನ್ಯ ಮೊಯ್ಲಿಯವರು ಏನು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ ಅದನ್ನು ಮೊದಲು ಅವರು ಮುಗಿಸಲಿ, ಅನಂತರ ನೋಡೋಣ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯ್ಲಿ.— ಈಗ ಯಾವುದಾದರೊಂದು ವಿಚಾರವನ್ನು ಮಂಡಿಸುವಾಗ ಅದಕ್ಕೆ ತಡೆ ಉಂಟು ಮಾಡಬೇಕೆಂಬುದು ನಮ್ಮ ಇಚ್ಛೆ ಅಲ್ಲ. ಮೊದಲು ನಮ್ಮ ಅಭಿಪ್ರಾಯವನ್ನು ಕೇಳಿ ಅದು ಸರಿಯಿಲ್ಲವೆಂದು ನಿಮಗೆ ಅನಿಸಿದರೆ ಅನಂತರ ಇದು ಸರಿಯಿಲ್ಲ ಎಂದು ಹೇಳಿಬಹುದು, ಈ ಸದನದಲ್ಲಿ ಯಾವುದೇ ಒಂದು ಕಾರ್ಯಕಲಾಪ ನಡೆದರೂ ಕೂಡ...

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ.— ಎಲ್ಲಾ ವಿಚಾರಗಳನ್ನೂ ಕೂಡ ಇಲ್ಲಿ ತಮಗೆ ನೋಟೀಸ್ ಕೊಟ್ಟು ಎದ್ದು ನಿಂತು ಮಾತನಾಡುವುದಕ್ಕಾಗುವುದಿಲ್ಲ. ಆದರೂ ಇಲ್ಲಿ ಕೆಲವು ನೀತಿ ನಿಯಮಗಳಿವೆ ಆ ನೀತಿನಿಯಮಗಳನ್ನೆಲ್ಲಾ ಗಾಳಿಗೆ ತೂರಿ ಯಾರಾದರೂ ಮಾತನಾಡುವುದಾದರೆ ಅದಕ್ಕೆ ಅನುಮತಿ ಕೊಡುವುದು ತಮಗೇ ಬಿಟ್ಟದ್ದು. ಈಗ ಏನು ವಿಷಯ ಪ್ರಸ್ತಾಪ ಮಾಡುತ್ತಿದ್ದಾರೆ, ಆ ಪ್ರಸ್ತಾಪ ನಿಯಮ ೬೧(೨). (೩) ಇದಕ್ಕೆ ಸಂಬಂಧಪಟ್ಟಿದ್ದು. ಈ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕಾಗುವುದಿಲ್ಲ.....

(ಗೊಂದಲ)

ಶ್ರೀ ಎಂ. ವೀರಪ್ಪಮೊಯ್ಲಿ.— ಈ ವಿಚಾರವನ್ನು ಇಲ್ಲಿ ಎತ್ತವುದಕ್ಕೆ ಅವಕಾಶವಿಲ್ಲ. ಎರಡನೆಯದಾಗಿ, ಒಂದು ನಿಲುವಳಿ ಸೂಚನೆಯ ಅಡಿಯಲ್ಲಿ ಒಂದಕ್ಕಿಂತ ಹೆಚ್ಚಿಗೆ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಸಾಧ್ಯವಿಲ್ಲ, ಟ್ರಾನ್ಸ್‌ಫರ್ಸ್ ಎಂದರೆ ಎಷ್ಟು ? ಐವತ್ತೇ ? ನೂರೇ ? ಐನೂರೇ ? ಹದಿನೈದು ಸಾವಿರವೇ? ಅಥವಾ ಇಪ್ಪತ್ತು ಸಾವಿರವೇ? ಇಲ್ಲಿ ಎಷ್ಟು ಇಲಾಖೆಗಳಿವೆ. ಇದು ನಿರ್ದಿಷ್ಟವಾಗಿ ಯಾವುದಾದರೂ ಒಂದು ಇಲಾಖೆಗೆ ಸಂಬಂಧಪಟ್ಟಿದ್ದೇ? ಅಥವಾ ನಿರ್ದಿಷ್ಟವಾಗಿ ಯಾರಾದರೂ ಅಧಿಕಾರಿಗೆ ಸಂಬಂಧಪಟ್ಟಿದ್ದೇ ಅಥವಾ ಒಂದು ನಿರ್ದಿಷ್ಟವಾದ ನೀತಿಗೆ ಸಂಬಂಧಪಟ್ಟಿದ್ದೆ ಅಂದರೆ ಅದು ಏನೂ ಇಲ್ಲ. ಇವರ ನೋಟೀಸ್‌ನಲ್ಲಿ ಸ್ಪಷ್ಟವಾಗಿದೆ.

> ''ಇತ್ತೀಚಿನ ವರ್ಗಾವಣೆ ಕಾಲದಲ್ಲಿ ರಾಜ್ಯ ಸರ್ಕಾರ ತನ್ನ ನೌಕರರನ್ನು ವರ್ಗಾವಣೆ ಮಾಡುವ ವಿಷಯದಲ್ಲಿ ಜಾರಿಯಲ್ಲಿರುವ ನಿಯಮಗಳನ್ನು ಉಲ್ಲಂಘಿಸಿ ಸಾರ್ವಜನಿಕ ಹಿತವನ್ನು ಗಮನಿಸದೆ ತನಗೆ ಇಷ್ಟಬಂದಂತೆ ಸರ್ಕಾರೀ ನೌಕರರನ್ನು ವರ್ಗಾವಣೆ ಮಾಡಿರುವುದರಿಂದ ರಾಜ್ಯದ ಆಡಳಿತ ವ್ಯವಸ್ಥೆ ಕುಸಿದು ಬಿದ್ದಿದೆ'' ಎಂದು ಇದೆ.

ಇದರಲ್ಲಿ ನಿರ್ದಿಷ್ಟವಾದ ವಿಚಾರ ಏನಿದೆ? ಇದು ಸಾಮಾನ್ಯ ವಿಷಯವಾಗಿದೆ...

(ಗೊಂದಲ)

ಶ್ರೀ ಎಂ. ವೀರಪ್ಪಮೊಯ್ಲಿ.— ನಿರ್ದಿಷ್ಟವಾಗಿ ವರ್ಗಾವಣೆಯಲ್ಲಿ...

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ.— ಇಂಥ ಇಲಾಖೆಯಲ್ಲಿ ಬಹಳ ಜನ ಅಧಿಕಾರಿಗಳು ನಿವೃತ್ತರಾಗಿದ್ದಾರೆ, ಅವರ ಜಾಗಕ್ಕೆ ಇನ್ನೂ ಭರ್ತಿಯಾಗಿಲ್ಲ, ಆದ್ದರಿಂದ ಆಡಳಿತ ಕುಸಿದಿದೆ ಎಂದು ಹೇಳಿ ಅಡ್ಜರ್ನ್‌ಮೆಂಟ್ ಮೋಷನ್‌ನ್ನು ಮೂವ್ ಮಾಡಬೇಕು, ಇಲ್ಲದಿದ್ದರೆ ಇಂಥಾದ್ದು ನಾಳೆ ಮತ್ತೊಂದು ಅಡ್ಜರ್ನ್‌ಮೆಂಟ್ ಮೋಷನ್ ಬರುತ್ತದೆ. ಅಥವಾ ನಿಯಮಾವಳಿ ಪ್ರಕಾರ ಯಾವಾಗಲಾದರು ಕೆಲವರನ್ನು ಕಂಪಲ್‌ಸರಿ ರಿಟೈರ್ ಮಾಡುತ್ತಾರೆ. ಈ ಎಲ್ಲ ವಿಚಾರಗಳನ್ನು it is omni buss, routine administration.

(ಗೊಂದಲ)

ಉಪಾಧ್ಯಕ್ಷರು.— ದಯವಿಟ್ಟು ಮಾನ್ಯ ಸಚಿವರು ಹೇಳಿ ನಿಲ್ಲಿಸಲಿ. ಅನಂತರ ತಾವು ಮಾತನಾಡಿ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ.— ಇದು ರೂಲ್‌ನಲ್ಲಿ ಬರುವುದಿಲ್ಲ. ವಿಧಿಬಿಂದುವನ್ನು ನಾನು ಎತ್ತಿದ್ದೇನೆ. ಅದನ್ನು ಸಮರ್ಥನೆ ಮಾಡುತ್ತಿದ್ದೇನೆ. ಇದು ಸಮರ್ಥನೆಗೆ ಅರ್ಹವಿಲ್ಲದಿದ್ದರೆ ತಾವು ಪಾದಮಾಡಿ. ನಾವು ಅದಕ್ಕೆ ಅಡ್ಡಿಬರುವುದಿಲ್ಲ.

ಇನ್ನು ಮೂರನೆಯದಾಗಿ ಸೂಚನೆ ೬೧(೩)ರ ಪ್ರಕಾರ ನಿಲುವಳಿ ಸೂಚನೆಯು ಇತ್ತೀಚೆಗೆ ನಡೆದಂಥ ನಿರ್ದಿಷ್ಟವಾದ ವಿಷಯಕ್ಕೆ ಮಾತ್ರ ಸಂಬಂಧಪಟ್ಟಿರಬೇಕು. ಇಲ್ಲಿ ಇತ್ತೀಚೆಗೆ ನಡೆದದ್ದು ನಿರ್ದಿಷ್ಟವಾಗಿ ಏನಿದೆ? ಇವತ್ತು ವರ್ಗಾವಣೆಯ ಒಂದು ವಿಚಾರವನ್ನು ಇಟ್ಟುಕೊಂಡು ತಾವು ಚರ್ಚೆ ಮಾಡುತ್ತೇವೆಂದು ಹೇಳುವುದಾದರೆ that will be a direct confrontation by the Legislature on the executive power. It will be a gross interference of this Legislature on the administration. ಈಗ ವರ್ಗಾವಣೆ ಮಾಡುವ ವಿಚಾರದಲ್ಲಿ ಇದು ಸರಿಯಿಲ್ಲ. ಅಥವಾ ಇದು ಸರಿಯಾಗಿದೆ ಎನ್ನುವುದಾದರೆ, ರೂಟೀನ್ ಆಡ್ಮಿನಿಸ್ಟ್ರೇಷನ್‌ನಲ್ಲಿ ವರ್ಷಕ್ಕೆ ಒಮ್ಮೆ ವರ್ಗಾವಣೆ ಆಗೇ ಆಗುತ್ತದೆ. ಇದರ ಮಧ್ಯದಲ್ಲಿ ಆಗತ್ಯ ಬಿದ್ದರೆ

ವರ್ಗಾವಣೆ ಆಗೇ ಆಗುತ್ತದೆ. ಇದನ್ನೇ ಇಷ್ಯೂ ಮಾಡಿಕೊಂಡು ವರ್ಗಾವಣೆ ವಿಚಾರವನ್ನು ಚರ್ಚೆ ಮಾಡುತ್ತೇವೆಂದು ಹೇಳಿದರೆ You will be compelling the Government and verious departments to cancel various transfers. ಮಾನ್ಯ ಅಧ್ಯಕ್ಷೆಯವರೇ, ಇದು ಅತ್ಯಂತ ಅಪಾಯಕಾರಿಯಾದ ಒಂದು ದಾರಿಗೆ ಇವತ್ತು ನಮ್ಮ ಶಾಸಕಾಂಗವನ್ನು ಕೊಂಡು ಹೋಗತಕ್ಕಂಥ ಪ್ರಯತ್ನ ಸಾಮಾನ್ಯ ವಿರೋಧ ಪಕ್ಷದ ಸದಸ್ಯರಿಂದ ಆಗುತ್ತಿದೆ. ಇದು ಸಾಮಾನ್ಯವಾದಂಥ, ಸರಳವಾದಂಥ ವಿಚಾರವಲ್ಲ. ಇವತ್ತು ಎಲ್ಲ ವರ್ಗಾವಣೆ ವಿಚಾರಗಳನ್ನು ನಿಲುವಳಿ ಸೂಚನೆಯ ಮುಖಾಂತರ ಚರ್ಚೆ ಮಾಡಬೇಕೆಂದು ಕೇಳಬಹುದು. ಆದ್ದರಿಂದ ಸನ್ಮಾನ್ಯ ಎಡಿಯೂರಪ್ಪನವರು ಬಹಳ ಪ್ರಮುಖವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಆ ವಿಚಾರ ಇವತ್ತು ಚರ್ಚೆಯಾಗಬೇಕು. ಇನ್ನೂ ಕೆಲವು ಸಾರ್ವಜನಿಕ ವಿಚಾರಗಳು ಚರ್ಚೆಯಾಗಬೇಕು ಇವತ್ತು ಅಧಿಕಾರಿಗಳ ವರ್ಗಾವಣೆಯನ್ನು ಸೀಮಿತ ಮಾಡಿಕೊಂಡು ನಾವು ಅಧಿಕಾರಿಗಳ ಕೈಗೊಂಬೆಗಳಾಗಿ ಚರ್ಚೆ ಮಾಡುತ್ತೇವೆಂದು ಹೇಳಿದರೆ, ನಾವು ಅದಕ್ಕೆ ವಿರೋಧವಾಗಿದ್ದೇವೆ. This will be a direct affront on the routine administration by a group of legislators, which is totally wrong.

(ಗೊಂದಲ)

ಈಗ ತಾವು ಏನು ಚರ್ಚೆ ಮಾಡಬೇಕೆಂದು ವರ್ಗಾವಣೆಗಳ ಬಗ್ಗೆ ಹೇಳುತ್ತೀರಿ ಆದರಂತೆ ಕೆಲವು ವರ್ಗಾವಣೆಗಳ ನೀತಿಯ ಬಗ್ಗೆ ಚರ್ಚೆ ಮಾಡಬೇಕಾದರೆ ಅದಕ್ಕೆ ಬೇರೆ ವೇದಿಕೆ ಇದೆ. ಅದಕ್ಕೆ ಒಂದು ನೀತಿ ಇದೆ. ಆದ್ದರಿಂದ ಈಗ ಕೆಲವರ ವರ್ಗಾವಣೆಯಾಗಿರತಕ್ಕಂಥ ನೀತಿ ಸರಿ ಎಂದು ಹೇಳುತ್ತೇನೆಯೇ ಹೊರತು ವರ್ಗಾವಣೆಯ ನೀತಿಯೇ ಸರಿಯಿಲ್ಲವೆಂದು ಹೇಳುವುದು ಸರಿಯಲ್ಲ. ಅದಕ್ಕೆ ಬೇರೆ ವೇದಿಕೆ ಇದೆ.

ಶ್ರೀ ಹೆಚ್. ಏಕಾಂತಯ್ಯ.— ಯಾವ ವೇದಿಕೆ ಇದೆ ಎಂಬುದನ್ನು ತಾವು ಹೇಳಿ. ಯಾವ ನಿಯಮಾವಳಿ ಪ್ರಕಾರ ಇದನ್ನು ಇಲ್ಲಿ ಚರ್ಚೆ ಮಾಡಬೇಕೆಂಬುದನ್ನು ಮಾನ್ಯ ಸಚಿವರು ಹೇಳಲಿ.

ಶ್ರೀ ಎಂ. ವೀರಪ್ಪ ಮೊಯ್ಲಿ.— ಈ ವರ್ಗಾವಣೆಗಳು ಕೆಲವು ಅಧಿಕಾರಿಗಳಿಗೆ ಹಿತವಾಗಿಲ್ಲ, ಅಹಿತವಾಗಿದೆ ಎಂಬ ಆರೋಪವನ್ನು ಕ್ರಿಯೇಟ್ ಮಾಡಿ ಚರ್ಚೆ ಮಾಡಲು ಈ ವೇದಿಕೆಯನ್ನು ಬಿಡುವುದಕ್ಕೆ ನಾವು ತಯಾರಿಲ್ಲ.

(ಭಾರೀ ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ.— ಇವರು ಅವರ ಕೈಗೊಂಬೆಗಳು.

ಉಪಾಧ್ಯಕ್ಷೆಯವರು.— ಮಾನ್ಯ ಸದಸ್ಯರು ಏನು ಪ್ರಸ್ತಾಪವನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಆ ಬಗ್ಗೆ ನಿಮ್ಮ ಕಡೆಯಿಂದ ಒಬ್ಬರಿಬ್ಬರು ಮಾತನಾಡಿದರೆ ಆಮೇಲೆ ನಾನು ಆ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್ ಸಿಂಧ್ಯ.— ನಮ್ಮ ಕಡೆ ಸದಸ್ಯರು ಯಾರೂ ನಾವು ಏನು ಮಾತನಾಡಬೇಕೆಂದಿದ್ದೇವೆ ಅದನ್ನು ಇನ್ನೂ ಪ್ರಸ್ತಾಪ ಮಾಡಿಲ್ಲ. ನಾವು ನಿಲುವಳಿ ಸೂಚನೆಯನ್ನೇನು ಸಭಾಧ್ಯಕ್ಷರಿಗೆ ಕಳುಹಿಸಿಕೊಟ್ಟಿದ್ದೇವೆ, ಏನನ್ನು ಚರ್ಚೆ ಮಾಡಬೇಕೆಂದಿದ್ದೇವೆ. ಯಾವ ಒಂದು ಲಿಮಿಟೇಷನ್ ಹಾಕಿಕೊಂಡು ಚರ್ಚೆ ಮಾಡಬೇಕೆಂದಿದ್ದೇವೆ ಅದನ್ನು ನಮ್ಮ ಮಾನ್ಯ ನಾಯಕರಾಗಲಿ ನಾವಾಗಲಿ ಇನ್ನೂ ಪ್ರಸ್ತಾಪ ಮಾಡಿಲ್ಲ. ನಾನಾಗಲಿ ನಮ್ಮ ನಾಯಕರಾಗಲಿ, ಈ ಸದನದ ಶಾಸಕರು ಈ ವಿಚಾರದಲ್ಲಿ ದುಡ್ಡು ತೆಗೆದುಕೊಂಡಿದ್ದಾರೆಂದು ಖಂಡಿತವಾಗಿ ಹೇಳುವುದಕ್ಕೆ ಸಾಧ್ಯವಿಲ್ಲ. ಹಾಗೆ ಹೇಳಿದರೆ ತಪ್ಪಾಗುತ್ತದೆ ಮತ್ತು ಈ ಮನೆಗೆ ಅವಮಾನವಾಗುತ್ತದೆ.

(ಗೊಂದಲ)

ಶ್ರೀ ಟಿ.ಎಂ. ಮಂಜುನಾಥ್.— ಅವರು ಏನು ಮಾತನಾಡುತ್ತಿದ್ದಾರೆ ಅದು ಈ ಮನೆಯ ಸದಸ್ಯರಿಗೆ ಅವಮಾನ ಮಾಡಿದ ಹಾಗೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ.—ನಾವು ಹಣ ತೆಗೆದುಕೊಂಡಿದ್ದೇವೆಂದು ಯಾರೂ ಆರೋಪ ಮಾಡುತ್ತಿಲ್ಲ. ಹಣ ತೆಗೆದುಕೊಂಡಿದ್ದಾರೆಂದು ಪತ್ರಿಕೆಯಲ್ಲಿ ಬಂದಿದೆ.

(ಗೊಂದಲ)

ಉಪಾಧ್ಯಕ್ಷೆಣಿಯವರು.— ಇನ್ನೊಬ್ಬರಿಗೆ ಅವಕಾಶ ಕೊಡುತ್ತೇನೆ. ಮಾತನಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ.— ಸಿಂಧ್ಯರವರು ಹೇಳಿದಂತೆ ಈ ಸದನದಲ್ಲಿ ಎಲ್ಲಾ ಶಾಸಕರಿಗೆ ಮರ್ಯಾದೆ ಇದೆ, ಯಾರು ದುಡ್ಡು ತೆಗೆದುಕೊಂಡರೂ ಅದು ತಲೆ ತಗ್ಗಿಸತಕ್ಕ ಸಂಗತಿ. ನಿನ್ನೆ ಈ ವಿಚಾರ ಪಾರ್ಟಿ ಮೀಟಿಂಗ್‌ನಲ್ಲಿ ಚರ್ಚೆಯಾಗಿರುವುದರ ಬಗ್ಗೆ ಹಾಗೂ ಹಣದ ವಿಚಾರವಾಗಿ ಪತ್ರಿಕೆಯಲ್ಲಿ ಏನು ಬಂದಿದೆ. ಅದರ ಬಗ್ಗೆ ಚರ್ಚೆಯಾಗಲಿ.

(ಗೊಂದಲ)

ಉಪಾಧ್ಯಕ್ಷೆಣಿಯವರು,—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು. ಈಗ ಸಿಂಧ್ಯರವರೇ ತಾವು ಮಾತನಾಡಿ.

ಶ್ರೀ ಡಿ. ಬಿ. ಚಂದ್ರೇಗೌಡ.—ನಾನು ಕ್ರಿಯಾಲೋಪ ಎತ್ತುತ್ತೇನೆ. ನಾಗಮಂಗಲ ಕ್ಷೇತ್ರದಿಂದ ಗೆದ್ದು ಬಂದಿರತಕ್ಕ ಶಾಸಕರು ತಾವು ಕಾಂಗ್ರೆಸ್ ಪಾರ್ಟಿ ಎಂದು ಹೇಳುತ್ತಿದ್ದಾರೆ. ಅವರು ಮೊದಲಿನಿಂದಲೂ ಈ ವಾದ ಮಾಡುತ್ತಿದ್ದಾರೆ. ಆ ರೀತಿ ಅವರು ತಮ್ಮಗೆ ಬರೆದು ಕೊಟ್ಟಿದ್ದಾರೆಯೇ ? ಅದಕ್ಕೂ ಒಂದು ಇತಿಮಿತಿ ಇದೆ. ಅದನ್ನು ರೆಕಗ್‌ನೈಸ್ ಮಾಡಿದ್ದೀರಾ ?

(ಗೊಂದಲ)

ಉಪಾಧ್ಯಕ್ಷೆಣಿಯವರು.—ಈಗ ಅವರಿಂದ ನನಗೆ ಏನೂ ಪತ್ರ ಬಂದಿಲ್ಲ. ಸಿಂಧ್ಯ ಅವರೇ ತಾವು ಮಾತನಾಡಿ.

ಶ್ರೀ ಡಿ. ಬಿ. ಚಂದ್ರೇಗೌಡ.—ಏತಕ್ಕೆ ಈ ಸದನವನ್ನು ತಾವು ತಪ್ಪುದಾರಿಗೆ ಎಳೆಯುತ್ತಿದ್ದೀರಿ?

೧೨-೪೦ ಪಿ.ಎಂ.

ಶ್ರೀ ಕೆ. ಹೆಚ್. ಪಾಟೀಲ್.—ಈ ಸದನ ಗೌರವಾನ್ವಿತ ಸದನ, ಸರ್ಕಾರೀ ನೌಕರರ ವಿಷಯದಲ್ಲಿ ಈ ಕಡೆ ಸದಸ್ಯರಿಗೆ ಎಷ್ಟು ಸಂಬಂಧ ಇದೆಯೋ ಆ ಕಡೆ ಸದಸ್ಯರಿಗೂ ಅಷ್ಟೇ ಸಂಬಂಧ ಇದೆ. ನಾವು ಆಳುವ ಪಕ್ಷ, ನೀವು ಕೇಳುವ ಪಕ್ಷ. ಇದರ ಅರ್ಥ ನೀವು ನಮ್ಮ ನೌಕರರ ವಿಷಯದಲ್ಲಿ ಏನೂ ಕೇಳಬಾರದೆಂದು ಅಲ್ಲ. ಕೇಳಲಿಕ್ಕೆ ನಿಮಗೆ ಸಂಪೂರ್ಣವಾದ ಅಧಿಕಾರ ಇದೆ. ಆದರೆ ನಾನು ಹೇಳುವುದಿಷ್ಟೆ, ನನ್ನ ನೌಕರದವರರ ಬಗ್ಗೆ ಕೇಳುವಾಗ ನಮ್ಮ ಮಾನ್ಯ ಸದಸ್ಯರ ವಿಷಯದಲ್ಲಿ ಅಲ್ಲಸಲ್ಲದ ಆಪಾದನೆಗಳನ್ನು ಮಾಡುವ ವಿಷಯ ಸಲ್ಲದು. ಅದರಲ್ಲಿ ವಿರೋಧಪಕ್ಷದವರಿರಬಹುದು. ಆಳುವ ಪಕ್ಷದವರಿರಬಹುದು ಯಾರಿದ್ದರೂ ಸಹ ಅವರು ಈ ಮನೆಯ ಘನವಂತ ಸದಸ್ಯರೆಂಬುದನ್ನು ಯಾರೂ ಮರೆಯಬಾರದು. ಇದು ಒಂದು ಇನ್ನು ಎರಡನೇ ಮಾತು. ಇವತ್ತಿನ ದಿವಸ ಪತ್ರಿಕೆಯಲ್ಲಿ ಅಂತರ್ಗತವಾದಂಥ ಪಕ್ಷದ ವಿಚಾರ ಬಂತು ಎಂದಾಕ್ಷಣ ಪತ್ರಿಕೆಯಲ್ಲಿ ಬಂದಂಥ ವಿಚಾರವನ್ನೇ ನಾವು ಸದನದ ವಿಷಯವಾಗಿ ತೆಗೆದು ಕೊಳ್ಳಬಾರದೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಬಗ್ಗೆ ತಾವು ಕೇಳಲಿಕ್ಕೆ ಸಮರ್ಥರಿಲ್ಲ ಎಂದಲ್ಲ. ಕಾನೂನುಬದ್ಧವಾಗಿ ನಮಗೆ ಕೇಳುವ ಅಧಿಕಾರ ಇದ್ದರೂ ನೈತಿಕವಾಗಿ ಅಂತರ್ಗತವಾಗಿ ಪಕ್ಷದಲ್ಲಿ ಏನೇ ಆದರೂ ಪಕ್ಷದಲ್ಲಿ ಆಂತರ್ಗತವಾದ ವಿಚಾರವನ್ನು ಬಹಿರಂಗವಾಗಿ ಸದನದ ಎದುರಿಗೆ ಇಡುವುದು ಸೂಕ್ತವಲ್ಲ. ವರ್ಗಾವರ್ಗಿ ವಿಷಯ ನಿಮಗೂ ಗೊತ್ತಿದೆ, ನಮಗೂ ಗೊತ್ತಿದೆ. ಇವತ್ತು ಕೇಂದ್ರದಲ್ಲಿ ನೀವು ಆಳುತ್ತಿದ್ದೀರಿ, ರಾಜ್ಯದಲ್ಲಿ ನಾವು ಆಳುತ್ತಿದ್ದೇವೆ. ನಾವು ನಮಗೆ ಬೇಕಾದವರನ್ನು ವರ್ಗ ಮಾಡುವಂತೆ ಕೇಳಲು ನಿಮಗೆ ಅಧಿಕಾರ ಇದೆ. ನಿಮಗೆ ಬೇಕಾದವರನ್ನು ವರ್ಗ ಮಾಡುವಂತೆ ಕೇಳಲು ನಿಮಗೆ ಅಧಿಕಾರ ಇದೆ, ಆದರೆ ನಾವು ನೀವು ಬಡಿದಾಡುವುದರಿಂದ ಅದರ ದುರ್ಲಾಭವನ್ನು ಅಧಿಕಾರಿಗಳು ಪಡೆಯುತ್ತಾರೆ ಎನ್ನುವಂಥ ಮಾತನ್ನು ಮುಖ್ಯ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇವತ್ತು ಸಮರ್ಥವಾದ ಅಧಿಕಾರಿ ಇದ್ದರೆ, ಅವರಿಗೆ ಯಾರದೂ ಪತ್ರ ಇಲ್ಲದೆ ಎಲ್ಲೋ ಮೂಲೆಯಲ್ಲಿ ಬೀಳಬಹುದು. ಏನೂ ಇಲ್ಲದೇ ಇರುವವನು ಸಮರ್ಥಕವಾಗಿ ಇಲ್ಲದಿದ್ದರೂ ಪತ್ರದಲಿಯಿಂದ ಒಳ್ಳೆಯ ಸ್ಥಾನವನ್ನು ಪಡೆಯಬಹುದು. ಅಂಥವುಗಳನ್ನು ನಾವು ನೀವು ಕೂಡಿ ನಿವಾರಣೆ ಮಾಡಿಕೊಳ್ಳೋಣ. ತಪ್ಪಾಗಿದ್ದರೆ ತಿದ್ದಿಕೊಳ್ಳೋಣ. ಆದರೆ ಈ ಸದನದ ಮಾನತ್ವವನ್ನು ಕಡಿಮೆ ಮಾಡಬಾರದೆಂದು ವಿರೋಧಪಕ್ಷದ ಮುಖಂಡರುಗಳಿಗೂ ಹಾಗೂ ಎಲ್ಲರಿಗೂ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ವರ್ಗಾವರ್ಗಿ ವಿಷಯದಲ್ಲಿ ಎಲ್ಲ ಸದಸ್ಯರೂ ಪ್ರಯತ್ನ ಮಾಡಿದ್ದಾರೆಂಬುದು ಇಡೀ ದೇಶಕ್ಕೆ ಇಡೀ ರಾಜ್ಯಕ್ಕೆ ಗೊತ್ತಿದೆ. ಆದರೆ ಇವತ್ತು ನಡೆಯುತಕ್ಕ ಪ್ರಮಾಣದಲ್ಲಿ ಎಂದೂ ನಡೆದಿರಲಿಲ್ಲ ಎಂಬುದು ಒಂದು ಪ್ರಶ್ನೆ. ಈ ಮಧ್ಯೆ ನಾವು.....

ಶ್ರೀ ರಮಾನಾಥ ರೈ.—ವಾಟಾಳ್ ನಾಗರಾಜರು ತಾಸಕರಾಗಿ ಯಾವುದೇ ವರ್ಗಾವರ್ಗಿಗೆ ಪ್ರಭಾವ ಮಾಡಿಲ್ಲ ಎಂದು ಹೇಳಲಿ.

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಉಪಾಧ್ಯಕ್ಷರೆ, ನಾವು ಮಾತನಾಡಬೇಕೋ ? ಜೇಡಪ್ಪೋ

ಶ್ರೀ ವಾಟಾಳ್ ನಾಗರಾಜ್.—ನಾನು ಇಲ್ಲ ಎಂದು ಹೇಳಿಲ್ಲ. ಆದರೆ ಭ್ರಷ್ಟಾಚಾರದ ಬಗ್ಗೆ ಎತ್ತೆತ್ತು ಏನೇನು ನಡೆದಿದೆ ಎಂಬ ಬಗ್ಗೆ ಬೇಕಿ. ಎಲ್ಲ ಸದಸ್ಯರೂ ಅಧಿಕಾರಿಗಳ ವರ್ಗಾವರ್ಗಿ ಬಗ್ಗೆ ಕೇಳಿದ್ದಾರೆ. ಆದಕ್ಕೆ ನೀವೇ ಆಕಾಶ ಮಾಡಿದ್ದೀರಿ. ಆರ್ಜಿ ಕೊಡಿ ವರ್ಗಾವಣೆ ಮಾಡಿಸುತ್ತೇವೆ ಎಂದು ಪ್ರಕಟಣೆ ಮಾಡಿಸಿದವರು ನಿಮ್ಮ ಸರ್ಕಾರದವರೆಂ. ಆದ್ದರಿಂದ ಭ್ರಷ್ಟಾಚಾರ ಹೊರಗಡೆ ಬಂತು.

ಒಬ್ಬ ಸದಸ್ಯರು,—ಗುಂಡೂರಾವ್ ಸರ್ಕಾರ ಇದ್ದಾಗ ವಾಟಾಳ್ ನಾಗರಾಜರು...

ಶ್ರೀ ಡಿ. ಬಿ. ಚಂದ್ರೇಗೌಡ.—ಈ ರೀತಿ ಮಾತನಾಡುತ್ತಿದ್ದರೆ ಏನು ಮಾಡುವುದು ? ಯಾರಾದರೂ ಒಬ್ಬರು ಕಂಟ್ರೋಲ್ ಮಾಡಬೇಕಲ್ಲ.

ಶ್ರೀ ವಾಟಾಳ್ ನಾಗರಾಜ್.—(ಮಾನ್ಯ ಸದಸ್ಯರಾದ ದಯಾನಂದರಾವ್ ಅವರು ಎದ್ದು ನಿಂತು ಕೈ ಎತ್ತಿದ್ದನ್ನು ನೋಡಿ) ಮಾನ್ಯ ಉಪಾಧ್ಯಕ್ಷರೆ, ಅಲ್ಲಿ ಕೊನೇ ಸದಸ್ಯರು ಅವರ ಹೆಸರೇನೋ ಗೊತ್ತಿಲ್ಲ ಅವರು ಕೈ ಎತ್ತಿದರು.

ಉಪಾಧ್ಯಕ್ಷರು.—ಅವರು ಅಲ್ಲಿ ಕೂತಿದ್ದಾರೆ, ನಿಮ್ಮದು ಹೇಳಿ.

ಶ್ರೀ ವಾಟಾಳ್ ನಾಗರಾಜ್.—ಈ ಸದನದಲ್ಲಿ ಇದು ಬಹಳ ಅವಿವೇಕ. ಇದು ಸದನವೇ ಹೊರತು ಗರಡಿ ಮನೆ ಅಲ್ಲ.

ಉಪಾಧ್ಯಕ್ಷರು.—ದಯವಿಟ್ಟು ನೀವು ಕುಳಿತುಕೊಳ್ಳಬೇಕು.

SRI AZEEZ SAIT.—Mr. Vatal Nagaraj has uttered something towards the respected Members of this House, and other House. It should be expunged from the records.

ಶ್ರೀ ವಾಟಾಳ್ ನಾಗರಾಜ್.—ಏನಾಗಿದೆ ? ಏನೂ ಆಗಿಲ್ಲ. ೧೮೦ ಜನ ಸದಸ್ಯರಿದ್ದೀರಿ ಎಂದು ನೀವು ಕೈ ಮೇಲೆತ್ತಿದರೆ ಸಾಧ್ಯವಿಲ್ಲ.

(ಹಲವಾರು ಸದಸ್ಯರು ಮಾತನಾಡಲು ಎದ್ದು ನಿಂತರು)

ಉಪಾಧ್ಯಕ್ಷರು.—ಹೀಗೆ ನಾಲ್ಕು ನಾಲ್ಕು ಜನ ಎದ್ದು ನಿಂತು ಮಾತನಾಡುವುದಾದರೆ Nothing will go on record.

ಶ್ರೀ ವಾಟಾಳ್ ನಾಗರಾಜ್.—ನನಗೆ ರಕ್ಷಣೆ ಕೊಡಿ.

ಉಪಾಧ್ಯಕ್ಷರು.—ಖಂಡಿತ.

ಶ್ರೀ ಪಿ.ಜಿ.ಆರ್. ಸಿಂಧ್ಯ,—ಹಿರಿಯ ಸದಸ್ಯರೂ ಮಾನ್ಯ ಮಂತ್ರಿಗಳೂ ಆದ ಶ್ರೀ ಕೆ.ಹೆಚ್. ಪಾಟೀಲ್ ಅವರು...

(ಶ್ರೀ ವಾಟಾಳ್ ನಾಗರಾಜ್ ಅವರು ಎದ್ದು ಏನೋ ಮಾತನಾಡಿದರು.)

ಆಡಳಿತ ಪಕ್ಷದ ಸದಸ್ಯರೊಬ್ಬರು.—ಅಧ್ಯಕ್ಷರೇ, ಅವರನ್ನು ಕೂರುವುದಕ್ಕೆ ಹೇಳಿ. ಅವರು ಬಹಳ ಮಾತನಾಡುತ್ತಾರೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಅವರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ದಯವಿಟ್ಟು ಈ ಸದಸ್ಯರನ್ನು ಮೊದಲು ವರ್ಗ ಮಾಡಿ. ಆ ಮೇಲೆ ಚರ್ಚೆ ಮಾಡೋಣ.

ಶ್ರೀ ಎಲ್. ಆರ್. ಶಿವರಾಮೇಗೌಡ.—ನಾನು ಅವರ ಹಾಗೆ ಯಾವುದೇ ಪಕ್ಷದಿಂದ ಗೆದ್ದು ಬಂದವನಲ್ಲ ನಾನು ಸ್ವಂತ ಶಕ್ತಿಯ ಮೇಲೆ ಗೆದ್ದು ಬಂದಿರುವವನು. ನಾನು ಆಗಲೇ ಅಸೋಷಿಯೇಟ್ ಮೆಂ[illegible] ಆಗಿದ್ದೆನೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ.—ಮಾನ್ಯ ಹಿರಿಯ ಸದಸ್ಯರು ಹಾಗೂ ಮಂತ್ರಿಗಳಾದ ಪಾಟೀಲರು ಒಳ್ಳೆಯ ವಿಚಾರ ಹೇಳಿದ್ದಾರೆ. ಅದೆಲ್ಲವನ್ನೂ ಸಂಪೂರ್ಣವಾಗಿ ಒಪ್ಪುತ್ತೇನೆ. ನಾವ್ಯಾರೂ ಕೂಡಾ ಆಡಳಿತ ಪಕ್ಷದಲ್ಲಿ ಇರತಕ್ಕ ಅಂತಃ ಕಲಹಗಳನ್ನು ಈ ಸಭೆಯಲ್ಲಿ ಪ್ರಸ್ತಾಪ ಮಾಡಬೇಕೆಂದು ಖಂಡಿತಾ ಬಯಸುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಉಪಾಧ್ಯಕ್ಷಣಿಯವರೇ.....

ಶ್ರೀ ಪಿ.ಜಿ.ಆರ್. ಸಿಂಧ್ಯಾ.—ನಾನು ಇನ್ನೂ ಏನು ಹೇಳಬೇಕೆಂದೇ ಹೊರಟಿಲ್ಲ. ಆಗಲೇ ತಾವು ಮಾತನಾಡುತ್ತಿದ್ದೀರಿ. ನೀವು ಹೇಳಿದಾಗ ನಾವು ಕಂಳಿತು ಕೇಳಲಿಲ್ಲವೇ ?

ಒಬ್ಬ ಮಾನ್ಯ ಸದಸ್ಯರು.—ಅಂತಃಕಲಹ ಎನ್ನುವ ಪದ ಉಪಯೋಗಿಸಿ ಇಲ್ಲಿ ಇವರು ರಾಜಕೀಯವನ್ನು ತರುತ್ತಿದ್ದಾರೆ.

†ಶ್ರೀ ಪಿ. ಜಿ. ಆರ್. ಸಿಂಧ್ಯಾ (ಕನಕಪುರ).—ಪತ್ರಿಕೆಯಲ್ಲಿ ಏನು ವರದಿಯಾಗಿದೆ ಅದೆಲ್ಲಾ ಅಸತ್ಯ ಎಂದು ನಾನು ತಿಳಿದಿದ್ದೇನೆ. ಏಕೆಂದರೆ ತಾವು ೧೮೮ ಜನರು ಆರಿಸಿ ಬಂದಿದ್ದೀರಿ. ತಾವು ೫ ವರ್ಷ ಆಡಳಿತವನ್ನು ನಡೆಸಬೇಕೆನ್ನತಕ್ಕದ್ದು ನಮ್ಮ ಇಚ್ಛೆ. ನಿನ್ನೆ ತಾನೇ ಹಿರಿಯ ಸದಸ್ಯರಾದ ಜಾಲಪ್ಪನವರು ನಾವು ೨೪ ಪ್ಲಸ್ ೭ ಜನರು ಏನು ಮಾಡುವುದಕ್ಕಾಗುತ್ತದೆಂದು ಹೇಳಿದ್ದಾರೆ. ನಾವು ಇಷ್ಟು ಜನ ಈ ಸರ್ಕಾರವನ್ನು ಅಲ್ಲಾಡಿಸುವುದಕ್ಕಾಗುತ್ತದೆಯೇ ? ನೀವು ನಡಿಸಿಕೊಂಡು ಹೋಗಿ. ನಾವು ಏಕೆ ನಿಲುವಳಿ ಸೂಚನೆ ಕಳುಹಿಸಿದ್ದೇವೆ ಎಂದರೆ, ವರ್ಗಾವಣೆ ಮಾಡುವುದು ಸರ್ಕಾರದ ಹಕ್ಕು. ನಾವೂ ಆಡಳಿತ ಪಕ್ಷದಲ್ಲಿ ಇದ್ದಾಗ ಸಾಕಷ್ಟು ವರ್ಗಾವಣೆಗಳನ್ನು ಮಾಡಿದ್ದೇವೆ. ಕೇಂದ್ರದಲ್ಲಿ ನಮ್ಮ ಸರ್ಕಾರ ಇದೆ. ಅಲ್ಲಿ ನಮ್ಮ ಅಧಿಕಾರಿಗಳನ್ನು ಎಲ್ಲಿ, ಯಾವಾಗ, ಎಷ್ಟು ದಿವಸ ಇರಬೇಕೆಂದು ನಿರ್ಧರಿಸುವ ಹಕ್ಕು ನಮಗಿದೆ. ಅದನ್ನು ಮಾಡುತ್ತೇವೆ. ಆದರೆ ಇಲ್ಲಿ ವಿಷಯ ಏನೆಂದರೆ, ಕಳೆದ ೧೫-೨೦ ದಿವಸಗಳ ಹಿಂದೆ ಒಂದನೇ ತಾರೀಖಿನಿಂದ ಆಚೆಗೆ ಯಾವುದೇ ವರ್ಗಾವಣೆ ಆರ್ಜಿಗಳನ್ನು ತೆಗೆದುಕೊಳ್ಳುವುದಿಲ್ಲವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ವರ್ಗಾವಣೆಯನ್ನು ಆ ನಂತರ ನಿಲ್ಲಿಸುತ್ತೇವೆನ್ನುವ ಮಾತನ್ನು ಹೇಳಿದ್ದಾರೆ. ಕೇವಲ ಮುಖ್ಯಮಂತ್ರಿಗಳ ಬಾಯಿಂದ ಇದು ಬಂದಿದ್ದು ಅಲ್ಲ. ಸಚಿವ ಸಂಪುಟದ ತೀರ್ಮಾನ ಆಗಿದೆ ಎನ್ನುವ ಮಾತನ್ನು ಇಡೀ ರಾಜ್ಯಕ್ಕೆ ಹೇಳಿದರು. ಕಳೆದ ೧೫-೨೦ ದಿವಸಗಳಿಂದ ತಾಲ್ಲೂಕು ಮಟ್ಟದ ಸರ್ಕಾರಿ ಕಚೇರಿಗಳಲ್ಲಿ, ಯಾವುದೇ ಇಲಾಖೆಯ ಕಚೇರಿ ಇರಲಿ, ಆಲ್ಲಿ ಕೆಲಸ ಮಾಡುವುದಕ್ಕೇ ಆಗಿಲ್ಲ. ಎಲ್ಲರೂ ಕೂಡಾ ಅವರಿವರನ್ನು, ಹಾಗೂ ನಮ್ಮನ್ನು ಹಿಡಿದುಕೊಂಡು ಬೆಂಗಳೂರಿಗೆ ಓಡಿ ಬಂದಿದ್ದಾರೆ. ನಾನು ಇಲ್ಲಿ ಯಾರ ಮೇಲೂ ಆಪಾದನೆ ಮಾಡುತ್ತಾ ಇಲ್ಲ. ಯಾರೂ ದುಡ್ಡು ತೆಗೆದುಕೊಂಡು ಕೆಲಸ ಮಾಡಿದ್ದಾರೆ ಎಂದು ನಾನು ಹೇಳುತ್ತಾ ಇಲ್ಲ. ಆದರೆ ಪತ್ರಿಕೆಗಳಲ್ಲಿ ವರದಿಯಾಗಿರುವುದನ್ನು ನಾವೆಲ್ಲರೂ ಓದಿದ್ದೇವೆ. ಯಾರದ್ದೇ ಮನಸ್ಸನ್ನು ನೋಯಿಸಬೇಕೆಂದು ನಾನು ಹೇಳುತ್ತಾ ಇಲ್ಲ. ಇವತ್ತು ಶಾಸಕರ ಭವನದಲ್ಲಿ ನಾವು ಓಡಾಡುವುದಕ್ಕೆ ಜಾಗವೇ ಇಲ್ಲ. ನಾನು ಮನೆಯಲ್ಲಿಯೇ ಇದ್ದೇನೆ. ಆಕಸ್ಮಾತ್ ಶಾಸಕರ ಭವನಕ್ಕೆ ಫೋನ್ ಮಾಡಲು ಹೋದರೆ ಅಲ್ಲಿ ಓಡಾಡುವುದಕ್ಕೇ ಜಾಗ ಇಲ್ಲ. ಶಾಸಕರಭವನದಲ್ಲಿ ನೂರಿಗೂ ಬಹಳ ಹೆಚ್ಚಾದರೆ ಆಗಿದೆ. ನಾನು ಏಕೆ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆಂದರೆ ಈ ಕಷ್ಟ ಇನ್ನೂ ಎಷ್ಟು ದಿವಸ ಇರುತ್ತದೆ ? ಕಾವೇರಿ ನೀರಿನ ಬಗ್ಗೆ ೨ ದಿವಸ ಚರ್ಚೆ ಮಾಡಿದ್ದೇವೆ. ಮುಂದಿನ ವಿಷಯಗಳ ಬಗ್ಗೆ ನಾವು ತಯಾರಿ ನಡೆಸಬೇಕಾಗುತ್ತದೆ. ಈ ವರ್ಗಾವಣೆಯ ವಿಷಯವೇ ಮುಂದುವರೆದರೆ ನಮ್ಮ ತಯಾರಿ ಹೇಗೆ ಮಾಡಿಕೊಳ್ಳುವುದಕ್ಕಾಗುತ್ತದೆ ? ವರ್ಗಾವರ್ಗಿಯಲ್ಲಿ ಆ ಜಾಗ, ಈ ಜಾಗ, ರೀಟೈನ್ ಎಂದು ಪೀಡಿಸುತ್ತಿರುವಾಗ, ಬರುತ್ತೀ ಮಂತ್ರಿಗಳ ಪಾಡೇನು ಎಂದು ನನಗಂತೂ ಗೊತ್ತಾಗುತ್ತಾ ಇಲ್ಲ. ಅವರಂ ನಿದ್ರೆಯನ್ನು ಎಷ್ಟು ದಿವಸದಿಂದ ಮಾಡಿಲ್ಲವೋ ಅಥವಾ ಇನ್ನೇನು ಮಾಡಿದ್ದಾರೋ ಎಂದು ನನಗೆ ಗೊತ್ತಿಲ್ಲ. ಇನ್ನು ವರ್ಗಾವಣೆಯಲ್ಲಿ ಕೆಲವರು ಜಾತಿಯನ್ನು ತೆಗೆದುಕೊಂಡು ಬರುತ್ತಾರೆ. ನಾನು ಆ ಜಾತಿ, ಈ ಜಾತಿ, ಇಷ್ಟು ಅನ್ಯಾಯ ನನಗೆ ಆಗಿದೆ ಎಂದು ಬರುತ್ತಾರೆ ಇದನ್ನೇನೂ ನಾವು ಅನುಭವಿಸಿಲ್ಲವೆಂದು ಹೇಳುವುದಿಲ್ಲ. ಮಾನ್ಯ ವೀರಪ್ಪ ಮೊಯ್ಲಿಯವರು ಎಕ್ಸಿಕ್ಯುಟೀವ್ ಮತ್ತು ಲೆಜಿಸ್ಲೇಚರ್‌ಗೆ ಡೈರೆಕ್ಟ್ ಕಾನ್‌ಫ್ರಂಟೇಷನ್ ಎಂದು ಹೇಳಿದರು. ಅದನ್ನು ಒಪ್ಪುವಷ್ಟು ಮೂರ್ಖರಲ್ಲ ನಾವು. ನಾವೂ ಕೂಡಾ ಆಡಳಿತ ಪಕ್ಷದಲ್ಲಿದ್ದು ಆಡಳಿತವನ್ನು ನಡೆಸಿದ್ದೇವೆ. ನಾವೂ ಕೂಡಾ ದಷ್ಟು ಒಳ್ಳೆಯ ಆಡಳಿತವನ್ನು ಕೊಟ್ಟಿದ್ದೇವೆ. ಆದರೆ ನಾವು ತಪ್ಪು ಮಾಡಿದ್ದೇವೆಂದು ಈಗ ಜನತೆ ನಮ್ಮ ಕೈಗೆ ಆಡಳಿತ ಸೂತ್ರವನ್ನು ಕೊಟ್ಟಿದೆ. ೧೫ ಸಾವಿರ ಮಾಡಿದ್ದೇವೋ, ೨೦ ಸಾವಿರ ಮಾಡಿದ್ದೇವೋ, ೨೫ ಸಾವಿರ ಮಾಡಿದ್ದೇವೋ, ೫೦ ಸಾವಿರ ಮಾಡಿದ್ದೇವೋ, ೫೦ ಕೋಟಿ ವ್ಯವಹಾರ ನಡೆ

ದಿದೆಯೋ ಏನೋ. ನನಗಂತೂ ಗೊತ್ತಿಲ್ಲ. ಆದರೆ ಇವತ್ತಿನ ಪತ್ರಿಕೆಗಳಲ್ಲಿ ಏನು ಬಂದಿದೆ ಜುಲೈ ತಿಂಗಳಲ್ಲೋ ಆಥವಾ ಇನ್ಯಾವ ತಿಂಗಳಲ್ಲೋ ಇನ್ನೊಂದು ಗಡುವನ್ನು ನಿರ್ಧಾರ ಮಾಡುತ್ತೇನೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಈ ಅಧಿವೇಶನ ಆದಮೇಲೆ ಇನ್ನೊಂದು ಸಾರಿ ಮಾಡಿಫಿಕೇಶನ್‌ಗೆ ಅವಕಾಶ ಕೊಡುತ್ತೇವೆ ಎನ್ನುವ ಅರ್ಥ ಬರುವ ರೀತಿಯಲ್ಲಿ ಸಂದ್ಧಿ ಪತ್ರಿಕೆಗಳಲ್ಲಿ ಬಂದಿದೆ. ಆದು ಬಂದಿರುವುದು ಸಣ್ಣ ಪತ್ರಿಕೆಗಳಲ್ಲಿ ಅಲ್ಲ ಸ್ವಾಮಿ. ಜವಾಬ್ದಾರಿಯುತ ಪತ್ರಿಕೆಯಲ್ಲಿ ಈ ಮಾತನ್ನು ಹೇಳಿದ್ದಾರೆ. ಜುಲೈ ತಿಂಗಳು ಎಂದೂ ಹೇಳಿದ್ದಾರೆ. ಜೂನ್ ಮತ್ತು ಜುಲೈನಲ್ಲಿ ತಾಲ್ಲೂಕು ಮಟ್ಟದಲ್ಲಿ ಅಧಿಕಾರಿಗಳು ಯಾರೂ ಕೆಲಸ ಮಾಡುವುದಿಲ್ಲ. ನಾನು ಅದನ್ನು ವ್ಯವಹಾರವೆಂದು ಹೇಳುವುದಿಲ್ಲ, ಅವ್ಯವಹಾರವೆಂದು ಹೇಳುವುದಿಲ್ಲ, ದುಡ್ಡು ತೆಗೆದುಕೊಂಡಿದ್ದಾರೆಂದು ಹೇಳುವುದಿಲ್ಲ. ಅವರು ತೆಗೆದು ಕೊಳ್ಳುತ್ತಾರೆ, ಇವರು ತೆಗೆದುಕೊಳ್ಳುತ್ತಾರೆಂದು ಹೇಳುವುದಿಲ್ಲ. ಆದರೆ ಸರ್ಕಾರದ ಕೆಲಸ ಮಾತ್ರ ನಡೆಯುವುದಿಲ್ಲ. ಆದಕ್ಕೊಂದು ನೀತಿಯನ್ನು ಹಾಕಿಕೊಂಡಿದ್ದೇವೆ. ಆರು ತಿಂಗಳಿಗೆ ಒಂದು ಸಾರಿ ನೀತಿಯನ್ನು ಬದಲಾವಣೆ ಮಾಡುತ್ತೇವೆಂದು ಹೇಳಿದ್ದೀರಿ. ಆದರಂತೆ ಬದಲಾವಣೆ ಮಾಡಿ, ಆದನ್ನು ನಾವು ಸ್ವಾಗತ ಮಾಡುತ್ತೇವೆ. ಆದರೆ ಡಿಐಜಿ ಮಟ್ಟದ ಅಧಿಕಾರಿಗಳನ್ನು ಡಿಐಎಸ್‌ಪಿ ಕೆಲಸಕ್ಕೆ ಹಾಕುತ್ತೇವೆಂದು ಹೇಳಿದರೆ ಆದನ್ನು ಸಹ ನಾವು ಬೇಡವೆಂದು ಹೇಳುವುದಿಲ್ಲ. ಐಜಿಪಿಯನ್ನು ಪಿ.ಸಿ. ಕೆಲಸಕ್ಕೆ ವರ್ಗ ಮಾಡಿ. ಆದು ನಿಮ್ಮ ಆಜನ್ಮಸಿದ್ಧವಾದ ಹಕ್ಕು. ನೀವು ಎಲ್ಲಿಯವರೆಗೆ ಅಧಿಕಾರದಲ್ಲಿ ರುತ್ತೀರಿ ಅಲ್ಲಿಯವರೆಗೆ ನೀವು ಇದನ್ನು ಮಾಡಿ ಆದು ನಿಮ್ಮ ಹಕ್ಕು. ಯಾರನ್ನು ಎಲ್ಲಿಗೆ ಬೇಕಾದರೂ ಹಾಕಿ. ಆದರಲ್ಲಿ ಸೋಷಿಯಲ್ ಜಸ್ಟೀಸ್ ವಿಚಾರ ಬರುವುದಿಲ್ಲ. ಹಿಂದುಳಿದ ವರ್ಗದವರಿಗೆ, ಅಲ್ಪ ಸಂಖ್ಯಾತರಿಗೆ ಮತ್ತೊಬ್ಬರಿಗೆ ಯಾವ್ಯಾವ ಸ್ಥಾನಮಾನವನ್ನು ಕೊಡಬೇಕು ಎಂಬುದು ಇಲ್ಲಿ ಬರುವುದಿಲ್ಲ. ಆದರೆ ಇದರ ನೀತಿಯ ಬಗ್ಗೆ ರಾಜ್ಯದ ಉಚ್ಚಮಟ್ಟದ ಈ ಸಭೆಯಲ್ಲಿ ತೀರ್ಮಾನ ಮಾಡಬೇಕಾಗುತ್ತದೆ. ಇದರಲ್ಲಿ ಅವ್ಯವಹಾರ ನಡೆದಿದೆ ಎಂದು ಹೇಳಿದರೆ ಶಾಸಕರಿಗೆ ನೋವಾಗುತ್ತದೆ. ನನಗೂ ಸಹ ನೋವಾಗುತ್ತದೆ. ಯಾರೋ ದುಡ್ಡು ತೆಗೆದುಕೊಂಡಿದ್ದಾರೆ, ಯಾರದೋ ಪಕ್ಕಳು ಹೋಟೆಲ್‌ಗಳಲ್ಲಿ ಕುಳಿತುಕೊಂಡು ಈ ಕೆಲಸ ಮಾಡುತ್ತಾರೆನ್ನುವ ವಿಚಾರ ಬಂದಾಗ ಆದು ನಮಗೆ, ನಮ್ಮ ರಾಜ್ಯಕ್ಕೆ ಗೌರವ ತರತಕ್ಕ ಪ್ರಶ್ನೆ ಆಗುವುದಿಲ್ಲ. ನಾವು ಹೇಳತಕ್ಕದ್ದು, ನೀವು ಎಷ್ಟು ಬೇಕಾದರೂ ವರ್ಗಾವಣೆಯನ್ನು ಮಾಡಿ. ಐಜಿಪಿಯನ್ನು ಪಿ.ಸಿ. ಕೆಲಸಕ್ಕೆ ಹಾಕಿ. ಸೆಕ್ರೆಟರಿಯನ್ನು ಒಬ್ಬ ಕ್ಲಾರ್ಕ್ ಮಾಡುವ ಕೆಲಸಕ್ಕೆ ಹಾಕಿ. ಆದರೆ ನಾವು ಅಧಿಕಾರಿಗಳ ಕೈಗೊಂಬೆಗಳಲ್ಲ. ನಾವು ಯಾರ ಕೈಗೊಂಬಿಗಳೂ ಅಲ್ಲ. ನಾವು ಸಹ ಸರ್ವ ಸ್ವತಂತ್ರರಾಗಿ ಆವರು ಗೆದ್ದಹಾಗೆ ನಾವು ಗೆದ್ದು ಬಂದಿದ್ದೇವೆ. ಸರ್ಕಾರದ ಕೆಲಸ ಮಾಡುವುದು ಅವರ ಧರ್ಮ. ಅವರು ಮಾಡತಕ್ಕ ತಪ್ಪುಗಳನ್ನು ಕೇಳತಕ್ಕದ್ದು ನಮ್ಮ ಕರ್ತವ್ಯ, ಅದಕ್ಕೋಸ್ಕರ ನಾವು ಕೇಳುತ್ತಿದ್ದೇವೆ. ಹೇಗಾದರೂ ನಡೆಸಿಕೊಂಡು ಹೋಗಿ ನಿಮ್ಮ ಸರ್ಕಾರವನ್ನು. ಆದರೆ ತಪ್ಪಾಗಿರುವುದನ್ನು ಕೇಳತಕ್ಕದ್ದು ನಮ್ಮ ಧರ್ಮ, ಅದನ್ನು ಕೇಳದಿದ್ದರೆ ತಪ್ಪಾಗುತ್ತದೆ. ರಾಜ್ಯದ ಜನ ನೀವು ಮಾಡಿರುವುದು ತಪ್ಪು, ನಿಮ್ಮ ಕರ್ತವ್ಯದಲ್ಲಿ ಚ್ಯುತಿಯಾಗಿದೆ ಎಂದು ಹೇಳುತ್ತಾರೆ. ಅದಕ್ಕೋಸ್ಕರ ನಾವು ವಿರೋಧವನ್ನು ವ್ಯಕ್ತ ಮಾಡುತ್ತಿದ್ದೇವೆ. ಈ ಸದನದಲ್ಲಿ ಇದರ ಬಗ್ಗೆ ಚರ್ಚೆಯಾಗಬೇಕು. ಆದು ನಿಲುವಳಿ ಸೂಚನೆಯ ರೂಪದಲ್ಲಿ ಚರ್ಚೆಯಾಗಬೇಕು. ಆಡಳಿತ ಯಂತ್ರ ಜುಲೈವರೆಗೆ ಅಂದರೆ ಆದು ಅಲ್ಲಿಯವರೆಗೆ ನಡೆಯುವುದಿಲ್ಲ. ಆಗ ಜನಸಾಮಾನ್ಯರು ಎಲ್ಲಿ ಹೋಗಬೇಕು ? ಅವರು ಏನು ಮಾಡಬೇಕು ಎಂಬುದನ್ನು ವಿಚಾರ ಮಾಡ ಬೇಕು. ಸರ್ಕಾರದ ಆಡಳಿತ ಯಂತ್ರ ಸ್ಥಗಿತವಾಗಿರತಕ್ಕದ್ದು ವರ್ಗಾವಣೆಯಿಂದಲ್ಲ. ಈ ಬಗ್ಗೆ ಇನ್ನು ಬಹಳ ಹೆಚ್ಚಿನ ವಿವರಗಳನ್ನು ಕೊಡಬೇಕಾಗುತ್ತದೆ. ಆದ್ದರಿಂದ ನಮ್ಮ ನಿಲುವಳಿ ಸೂಚನೆಯನ್ನು ತಾವು ಎತ್ತಿಹಿಡಿದು ಅದನ್ನು ಈ ಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದೂ ತಮ್ಮಲ್ಲಿ ಬೇಡಿಕೊಳ್ಳುತ್ತೇನೆ.

† ಶ್ರೀ ಡಿ.ಬಿ. ಚಂದ್ರೇಗೌಡ.—ಮಾನ್ಯ ಉಪಾಧ್ಯಕ್ಷೀಣಿಯವರೆ ಇಲ್ಲಿರತಕ್ಕ ಪ್ರಶ್ನೆ ಆಡ್ಮಿನಿಸ್ಟ್ರೇಟಿಬಗ್ಗೆ. ವಿವರವಾಗಿ ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳು ಹೇಳಿದ್ದಾರೆ. ನಾವು ಹೇಳುವುದಕ್ಕೆ ಮುಂಚೆಯೇ ನಮಗೆ ಪಾಠ ಹೇಳಿದ್ದಾರೆ.ತಮ್ಮ ಹೇಳಿಕೆಯಲ್ಲಿ ಇಲ್ಲಿ ಹೇಳಿದ್ದಾರೆ. ಇದರ ಸ್ಪೆಸಿಫಿಕ್ ವಿಷಯ ಏನು? ಆರ್ಜನ್ಸಿ ಎನು?ಇಂಪಾರ್ಟೆನ್ಸ್ ಏನು? ವರ್ಗಾವರ್ಗಿಯನ್ನು ಬಂಡವಾಳ ವನ್ನಾಗಿಟ್ಟುಕೊಂಡು ಅದೇ ಒಂದು ಉದ್ಯೋಗವಾಗಿ ಬಿಟ್ಟಿದೆ ಎನ್ನುವ ಸ್ಥಿತಿಗೆ ಈ ದೇಶದಲ್ಲಿರತಕ್ಕ ಪತ್ರಿಕೆಗಳಿಗೆ ಜನ ಬರೆಯುತ್ತಾ ಹೋದರೆ, ನಮ್ಮಂತಹ ಚುನಾಯಿತ ಪ್ರತಿನಿಧಿಗಳಿಗೆ ಎಷ್ಟರಮಟ್ಟಿಗೆ ಗೌರವ ಸಿಗಬೇಕು ಎನ್ನುವುದನ್ನು ಯೋಚನೆ ಮಾಡಬೇಕಾಗುತ್ತದೆ. ಇಂತಹ ಒಂದು ಪರಿಸ್ಥಿತಿಗೆ ನಾವು ಬಂದಿದ್ದೇವೆ. ಅಸ್ಸಾಂನಲ್ಲಿರತಕ್ಕ ಪರಿಸ್ಥಿತಿ, ಕಾಶ್ಮೀರದ ಚಳುವಳಿ ಏನೇ ಇರಲಿ, ನಾವು ಎಕ್ಸಿಕ್ಯೂಟಿವ್ ಪವರ್ಸ್ ಅನ್ನು ಶಾಸನದ ವ್ಯಾಪ್ತಿಯನ್ನು ಯಾರಿಂದ ಕೆಲಸ ಮಾಡುವುದಕ್ಕೆ ಹೊರಟಿದ್ದೇವೆ

ಎನ್ನುವುದನ್ನು ನಾವು ಮರೆಯಬಾರದು. ನಮಗೆ ಬಂದಿರತಕ್ಕ ಕಷ್ಟ ಏನೆಂದರೆ ಮಾನ್ಯ ಸಿದ್ಧಾರ್ಥರವರು ಹೇಳಿದಹಾಗೆ ಯಾವ ಜಿಲ್ಲೆಯಲ್ಲಿಯೂ ಆಫೀಸರ್‌ಗಳು ಇರುವುದಿಲ್ಲ. ತಾಲ್ಲೂಕುಮಟ್ಟದಲ್ಲಿ ಅಧಿಕಾರಿಗಳು ಇರುವುದಿಲ್ಲ. ಎಲ್ಲರೂ ಬೆಂಗಳೂರಿನಲ್ಲಿಯೇ ಇದ್ದಾರೆ.

ಶ್ರೀ ಕೆ. ಶಿವಮೂರ್ತಿ.—ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ನಾನು ಕ್ರಿಯಾಲೋಪವನ್ನು ಎತ್ತುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಪ್ರತಿಯೊಬ್ಬರೂ ಎದ್ದುನಿಂತು ಮಾತನಾಡುವುದಾದರೆ ನಾನು ಕುಳಿತುಕೊಳ್ಳುತ್ತೇನೆ. What is non-sense going on ? Are we not allowed to speak ?

(ಗೊಂಡಲ)

ಶ್ರೀ ಕೆ. ಶಿವಮೂರ್ತಿ.—ಮನಸ್ಸಿಗೆ ಬಂದಹಾಗೆ ಮಾತನಾಡಿ ಸರ್ಕಾರವನ್ನು ಟೀಕೆ ಮಾಡುವುದನ್ನು ನಾನಂ ಒಪ್ಪುವುದಿಲ್ಲ.

ಉಪಾಧ್ಯಕ್ಷರು.—ಶ್ರೀ ಶಿವಮೂರ್ತಿಯವರೇ, ನೀವು ಕುಳಿತುಕೊಳ್ಳಿ. ಮಾನ್ಯ ವಿರೋಧ ಪಕ್ಷದ ನಾಯಕರು ಎನುಹೇಳಬೇಕೆಂದು ಇದ್ದಾರೆ, ಅದನ್ನು ಹೇಳಲಿ. ಆ ಮೇಲೆ ಅದರ ಅಡ್ಜಸ್ಟಿಬಿಲಿಟಿ ಬಗ್ಗೆ ನಾನು ನೋಡುತ್ತೇನೆ.

(ಗೊಂದಲ)

Sri D.B. Chandre Gowda.—I am trying to convince the Chair not the member.

An Hon. Member.—A member has got every right to question

(interruption)

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ವಿರೋಧ ಪಕ್ಷದ ನಾಯಕರಂ ಮಾತನಾಡುವಾಗ 'ನಾನ್‌ಸೆನ್ಸ್' ಎಂದು ಹೇಳಿದ್ದಾರೆ. ಇದನ್ನು ಅವರು ವಾಪಾಸ್ಸು ತೆಗೆದುಕೊಳ್ಳಬೇಕು. ಶ್ರೀ ಶಿವಮೂರ್ತಿಯವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ಇಲ್ಲಿ ಅವರು ಬಾಯಿಗೆ ಬಂದ ಹಾಗೆ ಹೇಳುವುದಕ್ಕೆ ಆಗುತ್ತದೇನು ? ನಿಮ್ಮ ಸರ್ಕಾರ ಇದ್ದಾಗ ನೀವು ಏನು ಮಾಡಿದ್ದೀರಿ ?

(ಗೊಂದಲ)

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಇದರ ಅಡ್ಜಸ್ಟಿಬಿಲಿಟಿ ಬಗ್ಗೆ ಏನು ಮಾತನಾಡಬೇಕೆಂದು ಇದ್ದಾರೋ ಹೇಳಲಿ. ಆದನ್ನು ಕೇಳಿದ ನಂತರ ನಾನು ಅದರ ಬಗ್ಗೆ ರೂಲಿಂಗ್ ಕೊಡುತ್ತೇನೆ.

ಶ್ರೀ ಕೆ. ಶಿವಮೂರ್ತಿ.—ಅವರು ಡಿಮೆರಿಟ್ಸ್‌ನ್ನು ಹೇಳುತ್ತಾ ಹೋದರೆ ಅದು ಸರ್ಕಾರವನ್ನು ಟೀಕೆ ಮಾಡಿದಹಾಗೆ ಆಗುತ್ತದೆ.

(ಗೊಂದಲ)

ಉಪಾಧ್ಯಕ್ಷರು.—ಆ ಕಡೆಯಿಂದ ಹತ್ತುಜನ, ಈ ಕಡೆಯಿಂದ ಐದು ಜನ ಒಟ್ಟಿಗೆ ಎದ್ದುನಿಂತು ಮಾತನಾಡಿದರೆ ಹೇಗೆ ? ಹೀಗೆ ಮಾತನಾಡಿದರೆ ಯಾವುದೂ ರೆಕಾರ್ಡಿಗೆ ಹೋಗುವುದಿಲ್ಲ. ಈಗ ಮಾನ್ಯ ಚಂದ್ರೇಗೌಡರು ಮಾತನಾಡುತ್ತಾರೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಈಗ ನಮ್ಮ ವಿಷಯ ಏನಿದೆ ? ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಚರ್ಚೆ ಆಗುತ್ತಿದೆ. ರಾಜ್ಯದಲ್ಲಿ ಆಡಳಿತ ಕುಸಿದಿದೆ ಎನ್ನುವುದಕ್ಕೆ ಸಾಕಷ್ಟು ವಿವರಣೆಯನ್ನು ಕೊಟ್ಟಿದ್ದಾರೆ ಅದನ್ನು ಪುನಃ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇದಕ್ಕೆ ಕಾರಣ ಏನು ? ಇಲ್ಲಿ ಬರೇ ವರ್ಗಾವಣೆಗೋಸ್ಕರ, ಬೇರೆಯದಕ್ಕೆ ಅಲ್ಲ. ಕೆಲವು ಕಡೆ ಯಾವ ಕೆಲಸ ಕಾರ್ಯಗಳೂ ನಡೆಯುತ್ತಿಲ್ಲ. ಸಂಪೂರ್ಣವಾಗಿ ಆಡಳಿತ ಸ್ಥಗಿತವಾಗಿದೆ. ಇದು ಜರೂರು ವಿಷಯ ಅಲ್ಲವೆ ? ಇದಕ್ಕಿಂತ ಜರೂರು ವಿಷಯ ಯಾವುದು ಇದೆ ? ವರ್ಗ ಮಾಡುವ ಅಧಿಕಾರ ಇಲ್ಲವೆಂದಾಗಲೀ, ಆಥವಾ ಈ ಸಭೆಯಲ್ಲಿ ಎಕ್ಸಿಕ್ಯೂಟಿವ್ ಮತ್ತು ಲೆಜಿಸ್ಲೇಚರ್‌ಗೆ ಇರುವ ಸಂಬಂಧವನ್ನಾಗಲೀ, ಮಾಡಿರತಕ್ಕ ಸರಿತಪ್ಪುಗಳ ಬಗ್ಗೆ ಹೇಳಲು ನಾವು ನಿಂತಿಲ್ಲ. ರಾಜ್ಯದ ಆಡಳಿತ ವ್ಯವಸ್ಥೆ ಕುಸಿದಿದೆ ಎಂದು ನಾವು ಹೇಳಿದ್ದೇವೆ ಯಾವ ಕಾರಣಕ್ಕೆ ಕುಸಿದಿದೆ ? ಸಾರ್ವತ್ರಿಕ ವರ್ಗಾವರ್ಗಣೆ ಕಾಲದಲ್ಲಿ ರಾಜ್ಯ ಸರ್ಕಾರ ತನ್ನ ನೌಕರರನ್ನು ವರ್ಗಾವಣೆ ಮಾಡುವ ವಿಷಯದಲ್ಲಿ ನಿಯಮಗಳನ್ನು ಮೀರಿ

ವರ್ತಿಸಿದ್ದರಿಂದ ಹೀಗೆ ಆಗಿದೆ. ಇವರು ಯಾವ ನಿಯಮಗಳನ್ನು ಮೀರಿದ್ದಾರೆ ? ಎಕ್ಸಿಕ್ಯೂಟಿವ್ ಇಂಟರ್‌ಫಿಯರೆನ್ಸ್ ಎಂದು ಹೇಳಿದಾಗ ಇವತ್ತು ಯಾವುದೇ ಒಬ್ಬ ಅಧಿಕಾರಿಗೆ ಯಜಮಾನಿಕೆಯನ್ನು ವಹಿಸಿಕೊಟ್ಟಾಗ, ಜವಾಬ್ದಾರಿಯನ್ನು ವಹಿಸಿಕೊಟ್ಟಾಗ ಅದರಂತೆ ಅವರು ಕೆಲಸ ಮಾಡಬೇಕಾಗುತ್ತದೆ.

ಆದರೆ ತನ್ನ ಕೆಳಗಿನ ಅಧಿಕಾರಿಯ ಮೇಲೆ ಇರತಕ್ಕ ನಿಯಂತ್ರಣವನ್ನು ಸಂಪೂರ್ಣವಾಗಿ ನೀವು ಕಸಿದುಕೊಂಡಿದ್ದೀರಿ. ಜವಾಬ್ದಾರಿಯನ್ನು ನೀವು ಇಟ್ಟು ಕೊಂಡಿದ್ದೀರಿ. ಇವತ್ತು ಆಡಳಿತ ಯಂತ್ರದ ನಿಯಂತ್ರಣ ಕೆಟ್ಟು ಹೋಗಿದೆ. ಇವತ್ತು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ ಎಂದು ಹೇಳುತ್ತೇವೆ. ಹಾಗಿದ್ದರೆ, ನಿಯಂತ್ರಣದ ಅಧಿಕಾರವನ್ನು ಅವರಿಗೇ ಕೊಡಬೇಕು. ಇವತ್ತು ಆ ಅಧಿಕಾರ ಅವರಿಗೆ ಇಲ್ಲದೇ ಇರುವುದರಿಂದ, ಆಡಳಿತ ಕುಸಿದಿದೆ ಎಂದು ಹೇಳಬೇಕಾಗಿದೆ. ಇಂತಹ ವಿಧಿಯೊಳಗೆ ಇದು ಬರದೇ ಇದ್ದರೆ ಇನ್ನು ಯಾವ ವಿಧಿಯಲ್ಲಿ ಬರುತ್ತದೆ. ನಮಗೆ ಬೇರೆ ವಿಚಾರಗಳಲ್ಲಿ ಆಸಕ್ತಿ ಇಲ್ಲ. ಇವತ್ತು ಆಳುವ ಪಕ್ಷದವರಲ್ಲಿ ಈ ಬಗ್ಗೆ ಪ್ರತ್ಯಾಸ ಇದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ನಾವು ಏನು ಹೇಳಬೇಕೋ ಅದೆಲ್ಲವನ್ನೂ ಹೇಳಬೇಕಾಗುತ್ತದೆ. ಹಿರಿಯರಾದ ಮಾನ್ಯ ಕೆ. ಹೆಚ್. ಪಾಟೀಲರು ತಮ್ಮ ಅನುಭವದಿಂದ ಕೆಲವು ಮಾತುಗಳನ್ನು ಹೇಳಿದರು. ಅದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ, ಕೆಲವು ಸಾರಿ ಹೇಳಬೇಕಾಗುತ್ತದೆ. ಎಷ್ಟರ ಮಟ್ಟಿಗೆ ಈ ಸ್ಥಿತಿ ಹೋಗಿದೆ ಎನ್ನುವುದನ್ನು ಆರೋಗ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಿದ ಮಾತು ಎಲ್ಲರ ಮನಸ್ಸಿಗೂ ನಾಟಿರಬಹುದೆಂದು ನನಗೆ ಅನಿಸುತ್ತದೆ. ಈ ವರ್ಗಾವಣೆ ಬೇಡ ಸಾಕು, ಸಾಕು ಇದನ್ನು ಮುಂಗಿಸಿ, ನನಗಂತೂ ಸಾಕಾಗಿ ಹೋಗಿದೆ ಎನ್ನುವಂಥ ಸ್ಥಿತಿಗೆ ಮಂತ್ರಿಗಳು ಹೋಗುತ್ತಾರೆ. ಎಲ್ಲ ಅಧಿಕಾರಿಗಳು ಬೆಂಗಳೂರು ನಗರದಲ್ಲಿ ಇದ್ದಾರೆ, ಹಾಗಾದರೆ ಇದು ಎಂದು ಮುಗಿಯುತ್ತದೆ, ಆಡಳಿತ ಚಾಲೂ ಆಗಬೇಕಲ್ಲ ದಯವಿಟ್ಟು ಚಾಲನೆ ಕೊಡಿ, ಚಾಲನೆ ಮಾಡುವುದಕ್ಕೆ ಇರತಕ್ಕ ಸಮಸ್ಯೆಯನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ ಎಂದು ಹೇಳುತ್ತೇನೆ.

ಉಪಾಧ್ಯಕ್ಷಿಣಿಯರು.—ಇದು ಆಡ್ಜಿಟ್ ಆದ ಮೇಲೆ, ಇದಕ್ಕೆ ಸಹಿ ಮಾಡಿರುವವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಈಗ ನಿಮ್ಮ ಸಂಯುಕ್ತರಿಬ್ಬರು ಮಾತನಾಡಿದ್ದಾರೆ. ಇದರ ಬಗ್ಗೆ ನಾನು ಹೇಳುತ್ತೇನೆ. ಇದು ಅಡ್ಜಿಟ್ ಆದ ಮೇಲೆ ಸಹಿ ಮಾಡಿರುವವರಿಗೆ ಮಾತನಾಡುವುದಕ್ಕೆ, ಅವಕಾಶ ಕೊಡುತ್ತೇನೆ.

ಶ್ರೀ ಬಿ. ಎಸ್. ಯೆಡಿಯೂರಪ್ಪ.—ತಾವು ಅಡ್ಜಿಟ್ ಮಾಡುತ್ತೀರೆಂಬ ವಿಶ್ವಾಸ ನನಗೆ ಇದೆ, ಆಗಾಗಲೇ ತಮಗೆ ಕನ್‌ವಿನ್ಸ್ ಆಗಿದೆ.

ಉಪಾಧ್ಯಕ್ಷಿಣಿಯರು.—ಅಡ್ಜಿಟ್ ಆದರೆ ಖಂಡಿತ ತಮಗೆಲ್ಲರಿಗೂ ಅವಕಾಶ ಕೊಡುತ್ತೇನೆ.

ಶ್ರೀ ಪಿಚ್. ವಿಶ್ವಾಂತಯ್ಯ.—ಅಡ್ಜಿಟ್ ಆಗುವುದಕ್ಕೆ ಮುಂಚೆ ನಮಗೆ ಅವಕಾಶ ಕೊಡಬೇಕು. ನೀವು ಎಷ್ಟು ಕಡಿಮೆ ಸಮಯವನ್ನು ಕೊಡುತ್ತೀರೋ, ಅಷ್ಟು ಕಡಿಮೆ ಸಮಯದಲ್ಲಿಯೇ ನಾನು ಮಾತನಾಡುತ್ತೇನೆ.

(ಗೊಂದಲ)

ಉಪಾಧ್ಯಕ್ಷಿಣಿಯರು.—ನಿಮ್ಮ ಕಡೆಯಲ್ಲಿ ಇಬ್ಬರು ನಾಯಕರೂ ಮಾತನಾಡಿದ್ದಾರೆ, ಈ ಕಡೆಯಲ್ಲಿ ಲಾ ಮಿನಿಸ್ಟರು ಮಾತನಾಡಿದ್ದಾರೆ. ಆದ್ದರಿಂದ ಇದರ ಬಗ್ಗೆ ನಾನು ರೂಲಿಂಗ್ ಕೊಡುವುದಕ್ಕೆ ಇಷ್ಟ ಪಡುತ್ತೇನೆ. ಇದು ಅಡ್ಜಿಟ್ ಆದರೆ ಸಹಿ ಮಾಡಿರುವವರೆಲ್ಲರಿಗೂ ಅವಕಾಶ ಕೊಡುತ್ತೇನೆ. ದಯವಿಟ್ಟು ಈಗ ಎಲ್ಲರೂ ಕುಳಿತುಕೊಳ್ಳಬೇಕು.

(ಗೊಂದಲ)

MADAM DEPUTY SPEAKER.—I will now give my ruling.

"It is a routine matter of administration and doesn't warrant setting aside the regular business and take up this matter for discussion. Hon. members have got an opportunity to raise this issue during the discussion on Demands of Administration. Therefore, I have withheld my consent for the adjournment motion. If you have any specific case wherein there is violation of rules and all that, you can send it to me and I will see that something is done in the matter."

ಶ್ರೀ ಪಾಟಾಳ್ ನಾಗರಾಜ್.—ತಮ್ಮ ತೀರ್ಮಾನವನ್ನು ನಾವು ವಿರೋಧ ಮಾಡುವುದಿಲ್ಲ, ಆದರೆ ಸರ್ಕಾರದ ಪುರ್ಗಾಪಣ ನೀತಿಯನ್ನು ವಿರೋಧಿಸಿ, ಸಭಾತ್ಯಾಗ ಮಾಡುತ್ತೇನೆ.

(ಮೂನ್ಯ ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

MADAM DEPUTY SPEAKER.—Now I adjourn the House for lunch and meet at 2-00 P. M.

(The House adjourned at Five Minutes past One of the Clock to meet at 2-00 p.m.)

(ಸದನವು ಪುನಃ ೨ ಗಂಟೆ ೦೭ ನಿಮಿಷಕ್ಕೆ ಸಮಾವೇಶಗೊಂಡಿತು)

ಉಪಾಧ್ಯಕ್ಷಿಣಿಯವರು (ಶ್ರೀಮತಿ ನಾಗಮ್ಮ ಕೇಶವಮೂರ್ತಿ) ಪೀಠವನ್ನಲಂಕರಿಸಿದರು.

ಶ್ರೀ ಹೆಚ್. ಏಕಾಂತಯ್ಯ.—ನಾನು ಬೆಳಿಗ್ಗೆ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದೆ. ಇವತ್ತಿನ ದಿವಸ ಹಲವಾರು ಬೇಡಿಕೆಗಳ ಮೇಲೆ ಚರ್ಚೆ ಇದೆ. ದುರಾದೃಷ್ಟ ವಶಾತ್ ಈ ಬೇಡಿಕೆಗಳು ಏನಿವೆ ಈ ಬೇಡಿಕೆಗಳಿಗೆ ಸಂಬಂಧಪಟ್ಟ ಇಲಾಖೆಗಳಿಂದ ಸರ್ಕಾರದವರು ಈ ವರ್ಷದ ವಾರ್ಷಿಕ ವರದಿಗಳನ್ನು ಇಲ್ಲಿಯವರೆಗೆ ನಮಗೆ ಕೊಟ್ಟಿಲ್ಲ. ಕೇವಲ ಒಂದೇ ಒಂದು ವರದಿಯನ್ನು ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯವರು ಇವತ್ತು ಬೆಳಿಗ್ಗೆ ಕೊಟ್ಟಿದ್ದಾರೆ. ತದನಂತರ ಕೃಷಿ ಇಲಾಖೆಯವರು ಇಂಗ್ಲೀಷ್‌ನಲ್ಲಿ ವರದಿ ಅಚ್ಚು ಹಾಕಿಸಿ ಕೊಟ್ಟಿದ್ದಾರೆ, ಹೀಗಿರುವಾಗ ಯಾವ ಆಧಾರದ ಮೇಲೆ ನಾವು ಬೇಡಿಕೆಗಳನ್ನು ಚರ್ಚೆ ಮಾಡಬೇಕೆಂದು ತಾವು ಹೇಳಬೇಕು, ಎಲ್ಲಿಯವರೆಗೆ ವಾರ್ಷಿಕ ವರದಿಗಳನ್ನು ಸಕಾಲದಲ್ಲಿ ಸರ್ಕಾರದವರು ಕೊಡಲಿಕ್ಕೆ ಸಾಧ್ಯವಿಲ್ಲ ಅಲ್ಲಿಯವರೆಗೆ ತಾವು ಚರ್ಚೆಯನ್ನು ಮುಂದಕ್ಕೆ ಹಾಕಬೇಕು.

(ಗೊಂದಲ)

ಆದರ ಜೊತೆಯಲ್ಲಿ ಕಾರ್ಯ ನಿರ್ವಹಣೆಯ ಬಜೆಟ್, ಫರ್‌ಫಾರ್ಮೆನ್ಸ್ ಬಜೆಟ್ ಮತ್ತು ಆನ್ಯುಯಲ್ ರೀಪೋರ್ಟ್ಸ್ ಕೊಡದೆ ಇದ್ದ ಸಂದರ್ಭದಲ್ಲಿ ಬೇಡಿಕೆಗಳ ಮೇಲೆ ಚರ್ಚೆ ಮಾಡಲು ಸಾಧ್ಯವಿಲ್ಲ. ಸರ್ಕಾರದವರು ಸರಿಯಾದ ಉತ್ತರವನ್ನು ತರಿಸಿಕೊಡಬೇಕು. ವರದಿಯನ್ನು ಕೊಟ್ಟ ಮೇಲೆ ಚರ್ಚೆಯನ್ನು ತೆಗೆದುಕೊಳ್ಳಬೇಕೇ ಹೊರತು ಆದರ ಮೊದಲು ತಾವು ತೆಗೆದುಕೊಳ್ಳಬಾರದು.

† ಶ್ರೀ ಪಾಟಾಳ್ ನಾಗರಾಜ್ (ಚಾಮರಾಜನಗರ). — ಬೆಳಿಗ್ಗೆ ಸಭೆ ಪ್ರಾರಂಭವಾದಾಗ ನಾನಂ ತಮ್ಮ ಗಮನಕ್ಕೆ ತಂದೆ. ಹಿಂದಿನ ಸಾಲಿನಲ್ಲಿ ಸಭೆಯು ನಡವಳಿಕೆ ಮತ್ತು ರಾಜ್ಯದ ನೀತಿ ಏನಿದೆ ಎಂದರೆ ಕನ್ನಡದಲ್ಲಿ ಆಡಳಿತ ನಡೆಸಬೇಕೆಂಬುದು ಸರ್ಕಾರದ ನಿಲುವು ಮತ್ತು ನೀತಿ. ಆದರೆ ಅದಕ್ಕೆ ತದ್ವಿರುದ್ಧವಾಗಿ ಪ್ರತಿಯೊಂದು ಪಂಚಾಯಿತಿಯಿಂದ ಹಿಡಿದು ಶಾಸಕಾಂಗದ ಕಾರ್ಯಾಲಯದವರೆಗೆ ನಡೆಯುತ್ತಿದೆ. ನಾನು ಕನ್ನಡದಲ್ಲಿ ಕಳುಹಿಸಿದರೆ, ಅವರು ಇಂಗ್ಲೀಷ್‌ನಲ್ಲಿ ಉತ್ತರ ಬರೆಯುತ್ತಾರೆ. ಇವತ್ತು ಮೀನೆಂಗಾರಿಕೆ ಇಲಾಖೆಯವರು ಒಂದು ವರದಿಯನ್ನು (ರ್ಯ-೯೦ರದ್ದು) ಕಳುಹಿಸಿದ್ದಾರೆ. ಅದೂ ಇಂಗ್ಲೀಷ್‌ನಲ್ಲಿದೆ. ಸರ್ಕಾರದಿಂದ ಬರತಕ್ಕ ಪತ್ರಗಳು ಪುಸ್ತಕಗಳೂ, ವಿವಿಧ ಇಲಾಖೆಗಳಿಂದ ಬರತಕ್ಕ ವರದಿಗಳೂ ಎಲ್ಲವೂ ಸಮಗ್ರವಾಗಿ ಇಂಗ್ಲೀಷಮ್ಮು ಬಿಟ್ಟು ಕನ್ನಡ ಭಾಷೆಯಲ್ಲಿ ಇಲ್ಲ. ಶೇಕಡ ಒಂದೂ ಭಾಗ ಮಾತ್ರ ಕನ್ನಡದಲ್ಲಿ ಸರ್ಕಾರದ ಆಡಳಿತವನ್ನು ನಡೆಸುತ್ತಿದ್ದಾರೆ. ಸರ್ಕಾರದಲ್ಲಿರತಕ್ಕ

ಸಚಿವರು ಕೆಲವರನ್ನು ಬಿಟ್ಟರೆ ಎಲ್ಲರೂ ಇಂಗ್ಲೀಷ್‌ನಲ್ಲಿ ಬರೆಯುವವರೇ ಆಗಿದ್ದಾರೆ ಮಾನ್ಯ ಜಾರ್ಜ್ ಅವರ ಬಗ್ಗೆ ನಾನು ಮಾತ ಮಾಡಿದ್ದೇನೆ. ಕನ್ನಡದಲ್ಲಿ ಸ್ಪಷ್ಟವಾಗಿ ಮಾತನಾಡತಕ್ಕ ನೀತಿಯನ್ನು ಅವರು ಹೊಂದಿದ್ದಾರೆ ಸರ್ಕಾರಕ್ಕೆ ನಾವೇನು ಹೇಳಿಕೊಡಬೇಕಾಗಿಲ್ಲ. ಅವರೇ ಸತ್ಸಂಪ್ರದಾಯಗಳನ್ನು ಹಾಕಿಕೊಂಡು ಜಾರಿಗೆ ತರಬೇಕು.

ಸರ್ಕಾರದ ನೀತಿ ಕನ್ನಡ. ಇವತ್ತು ಸಂಬಂಧಪಟ್ಟ ಸಚಿವರು ಇಲ್ಲಿ ಬಂದಿಲ್ಲ. ಇದೇ ರೀತಿ ನಾವು ಇಲ್ಲಿ ಯಾವಾಗಲೂ ಮಾತನಾಡಿ ಕಾಲಕಳೆದುಕೊಂಡರೆ ಅದು ಒಳ್ಳೆಯದಲ್ಲ. ಆದ್ದರಿಂದ ಈ ಬಗ್ಗೆ ತಮ್ಮ ಸರ್ಕಾರದ ನೀತಿ ಏನು ಎಂಬುದು ತೀರ್ಮಾನವಾಗಬೇಕು. ನನಗೆ ಎಷ್ಟು ನೋವಾಗುತ್ತದೆಂದರೆ ಈ ಸಭೆಯಲ್ಲಿ ಶಾಸಕಾಂಗದವರು ಕಳುಹಿಸಿರತಕ್ಕ ಕಾಗದ ಇಂಗ್ಲೀಷಿನಲ್ಲಿದೆ. ನಾನು ಅಧ್ಯಕ್ಷರಿಗೆ ಹೇಳಿದ್ದೇನೆ ನನ್ನ ಗಮನ ಸೆಳೆಯುವ ಸೂಚನೆ ಕನ್ನಡದಲ್ಲಿದೆ. ನಿಲುವಳಿ ಸೂಚನೆ ಕಳುಹಿಸುವುದಕ್ಕೆ ನಿಲುವಳಿ ಸೂಚನೆ ಪತ್ರ ಕೇಳಿದರೆ ಅದು ಇಂಗ್ಲೀಷಿನಲ್ಲಿದೆ. ಕನ್ನಡದಲ್ಲಿ ಕೊಡಿ ಎಂದರೆ ಆದಿನ್ನೂ ಮುದ್ರಣವಾಗಿ ಬಂದಿಲ್ಲ ಎಂದು ಹೇಳುತ್ತಾರೆ. ಇಷ್ಟೊಂದು ಅಪಮಾನ ಕನ್ನಡದ ಬಗ್ಗೆ ಸರ್ಕಾರ ತೋರತಕ್ಕದ್ದು ಸರಿಯಲ್ಲ. ನಾನು ಹೇಳುವುದಿಷ್ಟೆ : ಸಾಮಾನ್ಯ ಮಂಡಲ ಪಂಚಾಯತಿಯಿಂದ ಹಿಡಿದು ವಿಧಾನಸಭೆಯವರೆಗೂ ಕನ್ನಡದಲ್ಲೇ ಆಡಳಿತ ನಡೆಸಬೇಕು ಎಂದು ಸರ್ಕಾರ ನಿರ್ಧಾರ ಮಾಡಿದೆ. ಆದ್ದರಿಂದ ಮಾನ್ಯ ಅಧ್ಯಕ್ಷರಿಗೆ ಹೇಳುತ್ತೇನೆ ನಾನು ಕನ್ನಡದಲ್ಲಿ ಪತ್ರ ಕೊಟ್ಟರೆ ಇಂಗ್ಲೀಷಿನಲ್ಲಿ ನನಗೆ ಉತ್ತರ ಕೊಡುವುದು ಸರಿಯಲ್ಲ. ಇದನ್ನು ತಾವು ನೋಡಿ ಪರಿಶೀಲನೆ ಮಾಡಬೇಕು ಏನು ಪರಿಸ್ಥಿತಿ ಇದೆ ಎಂದು ತಾವು ನೋಡಬೇಕು. ಪ್ರತಿಸಾರಿ ನಾನು ಕನ್ನಡದಲ್ಲಿ ಪರದಿಗಳನ್ನು ಕೊಡಿ ಎಂದು ಹೇಳುತ್ತಿದ್ದೇನೆ. ನಾನು ಅಜೀಜ್ ಸೇಠ್ ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಏಕೆಂದರೆ ಬಹಳ ಕಷ್ಟಪಟ್ಟು ಕನ್ನಡದಲ್ಲಿ ಮಾತನಾಡುತ್ತಾರೆ. ಸ್ವಲ್ಪ ಯದ್ವಾತದ್ವಾ ಮಾತನಾಡಬಹುದು. ನಾವೇನೂ ಅವರಿಗೆ ವ್ಯಾಕರಣಬದ್ಧವಾಗಿ ಪುಂಖಾನುಪುಂಖವಾಗಿ ಮಾತನಾಡಬೇಕು ಎಂದು ಹೇಳುವುದಿಲ್ಲ. ಸಮಗ್ರವಾಗಿ ಕನ್ನಡದಲ್ಲಿ ಮಾತನಾಡಬೇಕಾದ ಅಭಿಮಾನವನ್ನು ಎಲ್ಲರೂ ಬೆಳೆಸಿಕೊಳ್ಳಬೇಕು. ಆದ್ದರಿಂದ ನನಗೆ ಇಂಗ್ಲೀಷಿನಲ್ಲಿ ಬಂದಿರುವ ಪರದಿಯನ್ನು ಹರಿದು ಬಿಸಾಕುತ್ತಿದ್ದೇವೆ. ಇಂಗ್ಲೀಷ್ ಪರದಿಯನ್ನು ಯಾವುದೇ ಇಲಾಖೆಯವರು ಕೊಡಬಾರದು. ಶೇಕಡ ೭೦-೭೫ ಭಾಗ ಅಧಿಕಾರಿಗಳು ಇಂಗ್ಲೀಷ್ ಪರ ಇದ್ದಾರೆ. ಕನ್ನಡದ ಪರ ಇಲ್ಲ. ಆದ್ದರಿಂದ ಕನ್ನಡವನ್ನು ಐ.ಎ.ಎಸ್. ಅಧಿಕಾರಿಗಳಿಗೆ ಕಲಿಸತಕ್ಕ ಕೆಲಸ ಮೊದಲು ಆಗಬೇಕಾಗಿದೆ. ಇದು ಸರಿಯಾದ ನೀತಿ ಅಲ್ಲ ಎಂದು ಈ ಸಭೆ ಮೂಲಕ ತಿಳಿಸುತ್ತಿದ್ದೇನೆ. ಸರ್ಕಾರದ ನೀತಿಯನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು.)

ಉಪಾಧ್ಯಕ್ಷರು.— ಮಾನ್ಯ ವಿಕಾಂತಯ್ಯನವರು ವಿವಿಧ ಇಲಾಖೆಗಳ ವರದಿ ಬಗ್ಗೆ ಕೆಲವು ಮಾತುಗಳನ್ನು ಹೇಳಿದ್ದಾರೆ. ಈ ದಿನದ ಡಿಮ್ಯಾಂಡ್ಸ್ ಮೇಲಿನ ವರದಿ ಇವತ್ತು ತಾನೇ ಬಂದಿದೆ ಎಂದು ಹೇಳಿದ್ದಾರೆ. ನಾನು ಸರ್ಕಾರದ ಗಮನಕ್ಕೆ ತರುತ್ತೇನೆ. ಈ ರೀತಿಯಾಗಿ ಮಾಡದೆ ಆದಷ್ಟು ಬೇಗ ವರದಿಗಳನ್ನು ಸದಸ್ಯರಿಗೆ ಕಳುಹಿಸಿದರೆ ಅವರು ಅದರ ಬಗ್ಗೆ ಅಭ್ಯಾಸ ಮಾಡಿ ಮಾತನಾಡುವುದಕ್ಕೆ ಅನುಕೂಲವಾಗುತ್ತದೆ ಎಂಬ ಮಾತನ್ನು ಹೇಳುತ್ತೇನೆ.

SRI AZEEZ SAIT .— Reports naturally sometimes, have been delayed even in Parliament, even in Assembly. ಸದಸ್ಯರು ಹೇಳುವ ಪ್ರಕಾರ ಮುಖ್ಯ ಮಂತ್ರಿಗಳ ಗಮನಕ್ಕೆ ಇದನ್ನು ತಂದು ಮುಂದೆ ಡಿಲೇ ಆಗದ ರೀತಿ ನೋಡಿಕೊಳ್ಳುತ್ತೇವೆ.

ಶ್ರೀ ಎಚ್. ವಿಕಾಂತಯ್ಯ.— ಎಲ್ಲಿಯವರೆಗೆ ವಾರ್ಷಿಕ ವರದಿ ಕೊಡುವುದಿಲ್ಲ ಅಲ್ಲಿಯವರೆಗೆ ಚರ್ಚೆ ನಡೆಯಬಾರದು. ಇಲ್ಲಿ ೧೭ ಬೇಡಿಕೆಗಳಿವೆ. ಇದರ ಬಗ್ಗೆ ವಾರ್ಷಿಕ ವರದಿಯನ್ನು ಕೊಡದೇ ಇದ್ದರೆ ಚರ್ಚೆ ಅರ್ಥ ಪೂರ್ಣವೆನಿಸುವುದಿಲ್ಲ. ವರದಿ ಕೊಟ್ಟ ಮೇಲೆ ಚರ್ಚೆ ಆಗಲಿ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಉಪಾಧ್ಯಕ್ಷರೆ, ನಾನು ಒಂದು ಮಾತನ್ನು ಹೇಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.— ವಾರ್ಷಿಕ ವರದಿ ಇಲ್ಲ ಎಂದರೆ ಹೇಗೆ ಚರ್ಚೆ ಮಾಡಬೇಕು ? ಸರ್ಕಾರಕ್ಕೆ ತೊಂದರೆ ಇರುತ್ತದೆ, ಒಪ್ಪಿಕೊಳ್ಳುತ್ತೇನೆ. ಸರ್ಕಾರ ನಿನ್ನೆಯೇ ವರದಿಯನ್ನು ಕೊಡಬಹುದಾಗಿತ್ತು. ನಾನು ಸರ್ಕಾರಕ್ಕೆ ರಿಕ್ವೆಸ್ಟ್ ಮಾಡುತ್ತೇನೆ, ಯಾವುದೇ ಡಿಮ್ಯಾಂಡ್ ಬಂದಾಗ ಅದರ ಬಗ್ಗೆ ವರದಿಯನ್ನು ಅದೇ ದಿನ ಕೊಟ್ಟರೆ ಕಷ್ಟವಾಗುತ್ತದೆ. ಮುಂಚಿತವಾಗಿ ಕೊಡಬೇಕು.

ಶ್ರೀ ಜಿ. ಜಿ. ಚಂದ್ರೇಗೌಡ.— ನಾಲ್ಕನೇ ತಾರೀಖಿಗೆ ಈ ಡಿಮ್ಯಾಂಡಿನ ಚರ್ಚೆ ಇತ್ತು. ಇವತ್ತು ಏನೇ ತಾರೀಖಾದರೂ ಆಮೇಲೆ ಕೊಡುತ್ತೇವೆ ಎಂದರೆ ಏನು ಅರ್ಥ ?

SRI AZEEZ SAIT.— I said we will rectify the mistake.

ಶ್ರೀ ಜಿ. ಬಿ. ಚಂದ್ರೇಗೌಡ.— ವರದಿ ಇಲ್ಲದ ಮೇಲೆ ಡಿಮ್ಯಾಂಡ್‌ಗಳನ್ನು ಡಿಸ್‌ಕಷನ್‌ಗೆ ಏತಕ್ಕೆ ಹಾಕುತ್ತೀರಿ ?

SRI AZEEZ SAIT.— You have also done that when you were the Minister in the past government. Don't try only to break the head for the sake of breaking the head.

ಶ್ರೀ ಡಿ. ಬಿ. ಚಂದ್ರೇಗೌಡ.— ನಾಲ್ಕನೇ ತಾರೀಖು ಚರ್ಚೆಗೆ ಮಾಡಿ ಏಳನೇ ತಾರೀಖು ವರದಿ ಕೊಟ್ಟರೆ ಏನರ್ಥ ?

ಶ್ರೀ ಅಜೀಜ್ ಸೇಠ್. — ಹಿಂದೆ ಇದೇ ರೀತಿ ಆಗಿಲ್ಲವೆ ? Why don't you say 'Yes' or 'No' ?

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ.— ನೀವೂ ಕೂಡಾ ನಮ್ಮ ಜೊತೆ ಇದ್ದಿರಿ. ಈಗ ನಾವು ಇದನ್ನು ಹೇಳುತ್ತಿದ್ದೀರಿ.

ಶ್ರೀ ಅಜೀಜ್ ಸೇಠ್.— ಆಗ ನಿಮ್ಮ ಜೊತೆ ಇದ್ದೆವು. ಆಗ ಕೂಡಾ ನಾವು ಸ್ವಲ್ಪ ತಿದ್ದಿಸರಿಸಿ ಕೊಂಡು ಬಜೆಟ್ ಡಿಸ್‌ಕಷನ್ಸ್‌ನಲ್ಲಿ ಪಾಲ್ಗೊಂಡಿದ್ದೇವೆ.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ.— ಸರ್ಕಾರದ ಕಷ್ಟ ನಮಗೆ ಅರ್ಥವಾಗುತ್ತದೆ. ಕೆಲವು ಸಮಯ ತೊಂದರೆ ಆಗುತ್ತದೆ. ಇದು ನಮ್ಮ ಕಾಲದಲ್ಲೂ ಆಗಿದೆ. ಇವತ್ತು ಏನು ವಿಷಯ ಡಿಸ್ಕಷನ್ಸ್‌ಗೆ ಇದೆ, ಅದಕ್ಕೆ ಪೂರಕ ಟಿಪ್ಪಣಿ ಕೊಡದಿದ್ದ ಮೇಲೆ ಏಕೆ ಚರ್ಚೆಗೆ ಇಡುತ್ತೀರಿ ? ಳನೇ ತಾರೀಖು ಬಂದ ಡಿಮಾಂಡ್ಸ್ ಬಗ್ಗೆ ೭ನೇ ತಾರೀಖು ವರದಿ ಕೊಡುತ್ತೇವೆಂದು ಹೇಳುತ್ತೀರಿ.

MADAM DEPUTY SPEAKER.— I completely agree with what you have said.

SRI AZEEZ SAIT.— I agree with you. It is noted for future guidance.

ಶ್ರೀ ಆರ್. ವಿ. ದೇಶಪಾಂಡೆ.— ಇನ್ನು ಮುಂದೆಯಾದರೂ ಚರ್ಚೆಯ ದಿನದ ಮುಂಚಾನೆ ಎಲ್ಲವನ್ನೂ ಒದಗಿಸುವ ವ್ಯವಸ್ಥೆ ಮಾಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ — ಆದರ ತೊಂದರೆಯನ್ನು (ಆಡಳಿತ ಪಕ್ಷ) ಇದರ (ವಿರೋಧ ಪಕ್ಷ) ಅರ್ಥ ಮಾಡಿಕೊಳ್ಳುವುದಕ್ಕೆ ಸಿದ್ಧರಿದ್ದರೆ ಒಪ್ಪಿಕೊಳ್ಳುವುದಕ್ಕೆ ಸಿದ್ಧರಿದ್ದರೆ ಆ ಬಗೆ ನಾವು ಮಾತ್ರ ಸಿದ್ಧರಿಲ್ಲ. ತುಂಬಾ ಗೌರವದಿಂದ ನಾನು ಈ ಸರ್ಕಾರಕ್ಕೆ ಹೇಳುತ್ತೇನೆ. ಇವತ್ತು ನಾವು ಬೇಡಿಕೆಗಳ ಮೇಲೆ ಚರ್ಚೆ ಪ್ರಾರಂಭ ಮಾಡುವುದಕ್ಕಿಂತಾ ಮೊದಲು ನಮಗೆ ವರದಿಗಳು ಸಿಕ್ಕಿ ಅವನ್ನು ನಾವು ಅಭ್ಯಾಸ ಮಾಡಿ ಸರ್ಕಾರಕ್ಕೆ ಅನೇಕ ವಿಷಯಗಳ ಬಗ್ಗೆ ಕಾರ್ಯಕ್ರಮಗಳ ಬಗ್ಗೆ ನಾವು ಹೇಳಬೇಕಾಗುತ್ತದೆ. ಅನೇಕ ಸಂಗತಿಗಳನ್ನು ಸರ್ಕಾರದ ಗಮನಕ್ಕೆ ತರಬೇಕಾಗಿರುವುದರಿಂದ ಅವರು ಎಲ್ಲ ಪುಸ್ತಕಗಳನ್ನು ನಮಗೆ ಒದಗಿಸಬೇಕಾಗುತ್ತದೆ. ಆ ವಿವರಗಳನ್ನು ಮಂತ್ರಿಗಳೇನೂ ಬರೆಯುವುದಿಲ್ಲ. ಅದಕ್ಕಾಗಿಯೇ ಸರ್ಕಾರಿ ಸಿಬ್ಬಂದಿ ಇದೆ. ಈ ಸರ್ಕಾರ ಕಳೆದ ೬ ತಿಂಗಳಿಂದ ಜನಪರವಾದ ಯಾವುದೇ ಕಾರ್ಯಕ್ರಮಗಳನ್ನು ಹಾಕಿಕೊಂಡಿಲ್ಲ. ಈ ೬ ತಿಂಗಳಲ್ಲಿ ಸರ್ಕಾರ ತನ್ನದೇ ಆದ ದಾರಿಯಲ್ಲಿ ಸಾಗಿದ್ದು ಸರ್ಕಾರ ಜನರ ಪಾಲಿಗೆ ಸತ್ತಿದೆ ಎನ್ನುವ ಭಾವನೆಗೆ ನಾವು ಬರಬೇಕಾಗುತ್ತದೆ. ಎಲ್ಲಾ ಸಮಯವನ್ನು ಸರ್ಕಾರ ವರ್ಗಾವರ್ಗಿಯಲ್ಲೇ ಕಳೆದಿದ್ದು ಅದರಲ್ಲೂ ತೃಪ್ತರಾಗದ ಆಡಳಿತ ಪಕ್ಷದ ಶಾಸಕರು ಈ ಸಭೆಯನ್ನು ಪುತಿಭಟಿಸಿ ಹೊರಗೇ ಉಳಿದಹಾಗೆ ಕಾಣಿಸುತ್ತದೆ. ಅವರು ಒಳಗೆ ಬರುವುದಕ್ಕೆ ಸಿದ್ಧರಿಲ್ಲವೆಂದು ಒಂದು ವಾತಾವರಣ ಮೂಡಿದೆ. ನಮಗೆ ಬೇಕಾದ ಎಲ್ಲ ವಿವರಣೆಗಳನ್ನು ಒದಗಿಸಿ ಇಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ. It is shame on the part of the Government.

ಉಪಾಧ್ಯಕ್ಷರು.—ಅದನ್ನು ಸರಿಪಡಿಸುತ್ತೇವೆಂದು ಸರ್ಕಾರ ಈಗಾಗಲೇ ಒಪ್ಪಿಕೊಂಡಿದೆ.

ಶ್ರೀ ವಾಟಾಳ್ ನಾಗರಾಜ್.—ಇಲ್ಲಿನ ಸ್ಥಿತಿ ನೋಡಿದರೆ ಸರ್ಕಾರ ಇದೆಯೇ ಎಂದು ನಾನಾ ಕೇಳುತ್ತೇನೆ. ಈ ಸಭೆಯ ಪರಿಸ್ಥಿತಿ ನೋಡಿದರೆ ಸರ್ಕಾರ ಬಿದ್ದು ಹೋಗಿರಬಹುದು ಅಥವಾ ಬೀಳುವ ವ್ಯವಸ್ಥೆಯಲ್ಲಿರಬಹುದೆಂದು ನನಗನಿಸುತ್ತದೆ.

ಶ್ರೀ ಆರ್. ವಿ. ದೇಶಪಾಂಡೆ.—ಈಗ ಸಭೆಯಲ್ಲಿ ಮತಕ್ಕೆ ಹಾಕಿದರೆ ನಾವೇ ಮೆಜಾರಿಟಿಯಲ್ಲಿ ಇದ್ದೇವೆ.

(ಗೊಂದಲ)

ಉಪಾಧ್ಯಕ್ಷರು.—ಈಗ ಇದನ್ನು ಇಲ್ಲಿಗೇ ಮುಗಿಸೋಣ. ಮಾನ್ಯ ವಾಟಾಳ್ ನಾಗರಾಜ್ ಅವರು ಕನ್ನಡದಲ್ಲೇ ಎಲ್ಲಾ ವ್ಯವಹಾರ ನಡೆಯಬೇಕೆಂದೂ ಏನಾ ಹೇಳಿದ್ದಾರೆ ಅದನ್ನು ಸರ್ಕಾರ ಕೂಡಾ ಒಪ್ಪುತ್ತದೆ. ಇದು ಎಲ್ಲರೂ ಒಪ್ಪತಕ್ಕ ವಿಷಯ.

ಶ್ರೀ ವಾಟಾಳ್ ನಾಗರಾಜ್.—ಕನ್ನಡದ ಬಗ್ಗೆ ಸರ್ಕಾರ ಏನು ಹೇಳುತ್ತದೆ ಎಂಬುದು ನಮಗೆ ಗೊತ್ತಾಗಬೇಕು.

ಉಪಾಧ್ಯಕ್ಷರು.—ಆಜೀಜ್ ಸೇಠ್ ಅವರು ಚೆನ್ನಾಗಿ ಕನ್ನಡ ಮಾತನಾಡುತ್ತಾರೆಂದು ತಾವೇ ಹೇಳಿದಿರಿ.

ಶ್ರೀ ವಾಟಾಳ್ ನಾಗರಾಜ್.—ಕನ್ನಡದ ಬಗ್ಗೆ ಸರ್ಕಾರದ ನಿಲುವು ಏನು? ಕಳಕಳಿ ಏನು ?

ಶ್ರೀ ಆಜೀಜ್ ಸೇಠ್.—ಕನ್ನಡದ ಬಗ್ಗೆ ಅಭಿಮಾನ ನಿಮಗೆ ಎಷ್ಟು ಇದೆಯೋ ಅದಕ್ಕಿಂತಾ ಜಾಸ್ತಿ ಸರ್ಕಾರಕ್ಕೂ ಇದೆ. ಮತ್ತೆ ಏನು ಇವತ್ತು ಅಕಸ್ಮಾತ್ ಇಂಗ್ಲೀಷ್‌ನಲ್ಲಿ ಪರಿಚಿ ಬಂದಿದೆ ಅದು ಕನ್ನಡದಲ್ಲೂ ಬರುತ್ತಾ ಇತ್ತು. ಪಬ್ಲಿಸಿಟಿಗೋಸ್ಕರ ವಾಟಾಳ್ ನಾಗರಾಜ್ ಅವರು ಇಷ್ಟೊಂದು ಪಾರಾಡಿ ಈ ಮಟ್ಟಕ್ಕೆ ಬರುತ್ತಾರೆಂದು ನಾವು ನೆನೆಸಿರಲಿಲ್ಲ.

ಶ್ರೀ ವಾಟಾಳ್ ನಾಗರಾಜ್.— ನನ್ನ ಹುಟ್ಟಿನಿಂದ ಇಲ್ಲಿಯವರೆಗೆ ಪಕ್ಷಿಕೆಗಳಲ್ಲಿ ನನಗೆ ಪ್ರಚಾರ ಜೇಕಾದಷ್ಟು ಸಿಕ್ಕಿದೆ. ಇಲ್ಲಿ ಈ ವಿಷಯದಲ್ಲಿ ನಾನು ಪ್ರಚಾರ ಪಡೆಯಬೇಕಾಗಿಲ್ಲ. ಇಡೀ ನನ್ನ ಜೀವನದಲ್ಲಿ ನನ್ನ ಕೊನೆ ಉಸಿರು ಇರುವವರೆಗೂ ನನ್ನ ಜೀವ ಕನ್ನಡಕ್ಕೆ ಏನಾದರೂ ಏನ್ನುವುದು ಸರ್ಕಾರಕ್ಕೂ ಗೊತ್ತಿದೆ. ಮಾನ್ಯ ಆಜೀಜ್ ಸೇಠ್ ಅವರು ನನ್ನ ಬಗ್ಗೆ ಈ ರೀತಿ ಮಾತನಾಡತಕ್ಕದ್ದು ಒಳ್ಳೆಯದಲ್ಲ. ಅವರು ಹಿರಿಯ ಸದಸ್ಯರು ಎಂದು ಅವರಿಗೆ ಅಭಿನಂದನೆ ಸಲ್ಲಿಸಿದೆ. ಪಾಪ ಅವರಿಯದ್ದಾ ತದ್ದಾ ಕನ್ನಡ ಮಾತನಾಡಿದರೂ ಕನ್ನಡದ ಬಗ್ಗೆ ಮಾತನಾಡುತ್ತಾರೆಂದು ನಾನು ಅವರನ್ನು ನಾನು ಅಭಿನಂದಿಸಿದೆ. ನಾನು ಈ ವೇದಿಕೆಯನ್ನು ಪ್ರಚಾರಕ್ಕೋಸ್ಕರ ಬಳಸಿಕೊಳ್ಳಬೇಕಾಗಿಲ್ಲ ಮೊದಲಿನಿಂದಲೂ ಕರ್ನಾಟಕದ ಬಗ್ಗೆ, ಕರ್ನಾಟಕ ನಾಡು ನುಡಿಯ ಬಗ್ಗೆ ನನಗಿರತಕ್ಕ ಕಳಕಳಿ ಎಂತಹದ್ದು ಎನ್ನುವುದು ಅವರಿಗೆ ಗೊತ್ತೇ ಇದೆ.

ಉಪಾಧ್ಯಕ್ಷರು.—ಈಗ ಗಮನ ಸೆಳೆಯುವ ಸೂಚನೆಗೆ ಹೋಗೋಣ.

ಶ್ರೀ ವಾಟಾಳ್ ನಾಗರಾಜ್.—ತಮ್ಮ ಶಾಸಕಾಂಗದ ಬಗ್ಗೆ ತಾವು ಏನೂ ಹೇಳಲಿಲ್ಲ.

ಉಪಾಧ್ಯಕ್ಷರು.—ಅದರ ಬಗ್ಗೆ ನನ್ನ ಗಮನಕ್ಕೆ ತಂದಿದ್ದೀರಿ, ನಮ್ಮ ಶಾಸಕಾಂಗದಲ್ಲಿ ಆಗಿರುವ ತಪ್ಪನ್ನು ಸರಿ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಗಮನ ಸೆಳೆಯುವ ಸೂಚನೆ

೧ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬಸ್‌ಗಳ ಪ್ರಯಾಣ ದರವನ್ನು ಹೆಚ್ಚಿಸಿರುವುದರ ಬಗ್ಗೆ.

† ಶ್ರೀ ಡಿ. ಬಿ. ಚಂದ್ರೇಗೌಡ.—ನಾನು ಸರ್ಕಾರದ ಗಮನ ಸೆಳೆಯುತ್ತೇನೆ, ಈ ಬಗ್ಗೆ ಹೆಚ್ಚು ಜನ ಸದಸ್ಯರು ಮಾತನಾಡಲಿಕ್ಕೆ ಅವಕಾಶ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಂತ್ರಿಗಳ ಹೇಳಿಕೆ ಕಾಪಿ ನಮಗೆ ಕಳುಹಿಸಿ ಕೊಡಿ.

ಶ್ರೀ ಕೆ. ಜೆ. ಜಾರ್ಜ್.—ಹೇಳಿಕೆಯ ಕಾಪಿಯನ್ನು ನಾವು ಕಳುಹಿಸಿದ್ದೇವೆ.